

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 110 | Thursday 02-01-2025 | E-mail : maruti.b.hosamani76@gmail.com | Page: 4 | Price : Rs. 1/-


## ಕೂಡ್ಲಿಗಿ ಕೃಷಿಕ ಸಮಾಜ ಚುನಾವಣೆಗೆ ಅವಿರೋಧ ಆಯ್ಕೆ



ಸಿಹಿ ಕಹಿ ಸುದ್ದಿ

**ಕೂಡ್ಲಿಗಿ :** ದಿನಾಂಕ 31.12.2024 ರಂದು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ನಡೆದಿದ್ದು ಎಲ್ಲಾ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಿಲ್ಲಾ ಪ್ರತಿ ನಿಧಿಯಾಗಿ ಎಂ, ಬಸವರಾಜ್ ಕಕ್ಕುಪ್ಪಿ, ಅಧ್ಯಕ್ಷರಾಗಿ ಎಂ.ಜಿ ಸಿದ್ದನಗೌಡ ಶಾಂತನಳ್ಳಿ ಉಪಾಧ್ಯಕ್ಷರಾಗಿ ಜಯಣ್ಣ ಜಂಗಮ ಸೋವೆನಹಳ್ಳಿ ಪ್ರಧಾನ ಕಾರ್ಯದರ್ಶಿಯಾಗಿ ಬ್ಯಾಳಿ ವಿಜಯಕುಮಾರ್ ಗೌಡ, ಖಜಾಂಚಿ ಶಬ್ಬೀರ್ ಸಾಹೇಬ್ ಇವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಮ್.ಜಿ ಸಿದ್ದನಗೌಡ ಇವರು ಎರಡನೇ ಬಾರಿಗೆ ಅಧ್ಯಕ್ಷರಾಗಿ ಮರು ಆಯ್ಕೆ ಗೊಂಡಿದ್ದಾರೆ ಈ ಸಂದರ್ಭದಲ್ಲಿ ಚುನಾವಣೆ ಅಧಿಕಾರಿಯಾಗಿ ವಾಮದೇವ ಕೊಳ್ಳಿ ಇವರು ನಿರ್ವಹಿಸಿದರು ಇಲಾಖೆ ಅಧಿಕಾರಿಗಳು ಶ್ರವಣ ಕುಮಾರ್, ಸಾಂಭೋಜಿ ರಾವ್ ನೀಲ ನಾಯಕ್ ಮತ್ತು ಅಖಿಲ ಭಾರತೀಯ ರೈತ ಪಾರ್ಟಿಯ ಉಪಾಧ್ಯಕ್ಷರಾಗಿರ ತಕ್ಕಂತಹ ಶಿವಾನಂದ ಸ್ವಾಮಿ ಮತ್ತು ನಿರ್ದೇಶಕರು ನ್ಯಾಯ ವಾದಿಗಳಾದ ಸಿದ್ದಪ್ಪ ವಕೀಲರು ನಿರ್ದೇಶಕರಾದಂತಹ ಗಂಗಣ್ಣ ಯಂಬಳಿ, ನಟರಾಜ್ ಓ.ಟಿ ಎಂ ಬಿ ಅಯ್ಯನಹಳ್ಳಿ ವೀರಣ್ಣ. ಕಾನಾಮಡುಗು ಹಿರಿಯರಾದಂತಹ ಚಂದ್ರಯ್ಯ ಸ್ವಾಮಿ, ಬಣವಿ ಕಲ್ ಎರಿಸ್ವಾಮಿ , ವೀರೇಶ್ ಗೌಡ ಓಬಳಾಪುರ ವಿಜಯಕುಮಾರ್ ಕಲ್ಲಳ್ಳಿ, ಕೆ.ನಾರಾಯಣ ರೆಡ್ಡಿ ಮತ್ತು ಹಿರಿಯರಾದಂತಹ ನಂದಿ ಜಂಬಣ್ಣ ಇವರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

# ಭೀಮಾ ಕೋರೆಗಾಂವ್ ವಿಜಯೋತ್ಸವ ದಿನ-ಸ್ವಾಭಿಮಾನದ ದಿನ

ಸಿಹಿ ಕಹಿ ಸುದ್ದಿ

**ಬಳ್ಳಾರಿ :** ಛಲವಾದಿ ಮಹಾಸಭಾ ಜಿಲ್ಲಾ ಸಮಿತಿ ಬಳ್ಳಾರಿ ನಗರದ ಬಿ ಗೋನಾಳ್ 17 ನೇ. ವಾರ್ಡ್ ಭೀಮಾಕೋರೆ ಗಾಂವ್ ವಿಜಯೋತ್ಸವದ ಕಾರ್ಯಕ್ರಮವನ್ನು ದಿನಾಂಕ 01.01.2025 ರಂದು ಭೀಮ ಕೋರೆಗಾಂವ್ ಸ್ಥಂಭದ ಭಾವ ಚಿತ್ರಕ್ಕೆ ಕಾರ್ಯಕ್ರಮದಲ್ಲಿ ಸೇರಿದಂತೆ ಎಲ್ಲರೂ, ಹೂಮಾಲೆ ಅರ್ಪಿಸಿದ ನಂತರ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಸಿ.ಶಿವಕುಮಾರ್ ಜಿಲ್ಲಾ ಅಧ್ಯಕ್ಷರು ಛಲವಾದಿ ಮಹಾಸಭಾ ಜನವರಿ 1, ಜಗತ್ತಿಗೆ ಹೊಸ ವರ್ಷದ ಸಂಭ್ರಮಾಚಾರಣೆಯಾದರೆ ಶೋಷಿತರ ಪಾಲಿಗೆ ಇದು ಅಸ್ಪೃಶ್ಯತೆಯ ವಿರುದ್ಧ ಬಂಡೆದ್ದು ವಿಜಯ ಸಾಧಿಸಿದ ಮಹಾರ್ ಯೋಧರ ಶೌರ್ಯದ ದಿನ ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ರವರ ಬದುಕಿನಲ್ಲಿ ಮುಖ್ಯ ಪ್ರೇರಣೆ ನೀಡಿದ ಈ ದಿನವು ನಮ್ಮೆಲ್ಲರ ಪಾಲಿಗೆ ವಿಜಯೋತ್ಸವದ ದಿನವಾಗಿದೆ. ಕ್ರಿಶ. 1800 ರ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಆಡಳಿತ ನಡೆಸುತ್ತಿದ್ದ ಪೇಶ್ವಗಳು ಮನು ಸಂವಿಧಾನವನ್ನು ಜಾರಿಗೆ ತರುವ ಮೂಲಕ ಅಸ್ಪೃಷ್ಯತೆ ಜೀವನವನ್ನು ಕಠೋರವಾಗಿಸಿದ್ದರು. ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನಿಷೇಧಿಸಲಾಗಿತ್ತು. ಊರೊಳಗೆ ಸತ್ತ ದನಗಳನ್ನು ಹೊತ್ತುಕೊಂಡು ಹೋಗಿ ಮಾಂಸವನ್ನು ತಿನ್ನಬೇಕಾಗಿತ್ತು, ಅವರಿಗೆ ವಿದ್ಯೆ ಕಲಿಯುವ ಹಕ್ಕನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು. ಚಿನ್ನ ಅಥವಾ ಬೆಳ್ಳಿಯ ಆಭರಣ ತೊಡುವಂತಿರಲಿಲ್ಲ. ಅಸ್ಪಷ್ಟ ಹೆಣ್ಣು ಮಕ್ಕಳ ಮೇಲೆ ನಿರಂತರ ಅತ್ಯಾಚಾರಗಳನ್ನು ನಡೆಸಲಾಗುತ್ತಿತ್ತು. ಸಾರ್ವಜನಿಕ ಕೆರೆಗಳನ್ನು ಬಳಸದಂತೆ ನಿರ್ಬಂಧ ಹೇರಲಾಗಿತ್ತು.

ತಮ್ಮ ಮೇಲೆ ಈ ರೀತಿಯ ಅಮಾನುಷ ಕೃತ್ಯಗಳನ್ನು ನಡೆಸುತ್ತಿದ್ದ ಪೇಶ್ವಗಳ ದೌರ್ಜನ್ಯ ದಬ್ಬಾಳಿಕೆಯಿಂದ ರೋಸಿ ಹೋಗಿದ್ದ ಅಸ್ಪಷ್ಟರು ತಮ್ಮ ಜನಾಂಗದ



ಮುಕ್ತಿಗಾಗಿ ಹಾತೊರೆಯುತ್ತಿದ್ದರು ಎಂದು ಹೇಳಿದರು. ಅದೇ ರೀತಿಯಾಗಿ ಕೆ.ಶಂಕರ್ ನಂದಿಹಾಳ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಇದೇ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಅಧಿಪತ್ಯ ಸ್ಥಾಪಿಸಿದ್ದ ಬ್ರಿಟಿಷರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಮಹಾರ್ ವೀರ ಸಿದ್ಧನಾಕನ ನೇತೃತ್ವದಲ್ಲಿ ಮಾತುಕತೆ ನಡೆಸಿ ತಮ್ಮನ್ನು ಬೆಂಬಲಿಸಿದರೆ

ಅಸ್ಪೃಷ್ಯತೆ ಎಲ್ಲಾ ದೌರ್ಜನ್ಯ ದಬ್ಬಾಳಿಕೆಗೆ ಅಂತ್ಯ ಹಾಡುತ್ತೇವೆ ಹಾಗೂ ಮಕ್ಕಳಿಗೆ ವಿದ್ಯಾಭ್ಯಾಸ ಕಲ್ಪಿಸುವ ಭರವಸೆ ನೀಡಿದರು.

ಅಸ್ಪೃಷ್ಯತೆ ಆಚರಣೆಯಿಂದ ನೊಂದು ಬೆಂದಿದ್ದ ವೀರ ಮಹಾರ್ ಜನಾಂಜದ 500 ಜನ ಯುವ ಯೋಧರು ಯುದ್ಧ ತರಬೇತಿಯೊಂದಿಗೆ 1818 ರ ಜನವರಿ 1 ರಂದು ಬ್ರಿಟೀಷ್ ಕ್ಯಾಪ್ಟನ್ ಎಸ್.ಎಸ್ ಸಂಡನ್ ನೇತೃತ್ವದಲ್ಲಿ ಭೀಮಾ ನದಿಯ ತೀರದಲ್ಲಿ ಕೋರೆಗಾವ್ ಎಂಬ ಸ್ಥಳದಲ್ಲಿ ಸುಮಾರು 28,000 ಸೈನಿಕರಿದ್ದ ಬ್ರಾಹ್ಮಣ ಪೇಶ್ವಗಳ ಮೇಲೆ ಯುದ್ಧ ಸಾರಿ ಸುಮಾರು 13/14 ಸಾವಿರಕ್ಕೂ ಹೆಚ್ಚಿನ ಪೇಶ್ವ ಗಳ ಸೈನಿಕರನ್ನು ಕೊಂದು ಹಾಕಿ ಆಡಳಿತವನ್ನು ವಶ ಪಡಿಸಿಕೊಳ್ಳುವ ಮೂಲಕ ತನ್ನ ಮೇಲಿನ ಅಸ್ಪೃಶ್ಯತಾ ಆಚರಣೆಗೆ ಅಂತ್ಯ ಹಾಡಿದರು. ಈ ಸಂದರ್ಭದಲ್ಲಿ ಸುಮಾರು 22/ 25 ಜನ ವೀರ ಮಹಾರ್ ಯೋಧರು ಬಲಿದಾನವಾಗುವ ಮೂಲಕ ನಮ್ಮ ಸಮುದಾಯವೇ ತಲೆ ಎತ್ತಿ ನಿಲ್ಲುವಂತೆ ಮಾಡಿದ್ದಾರೆ.

ವೀರ ಯೋಧರ ಗೌರವಾರ್ಥ ಯುದ್ಧ ನಡೆದ ಜಾಗದಲ್ಲಿ 65 ಅಡಿಯ ಎತ್ತರದ ಭವ್ಯ "ವಿಜಯ ಸ್ಥಂಭ" ನಿರ್ಮಿಸಿ ಆ ಸ್ಥಂಭದ ಮೇಲೆ ಅಮರ ವೀರರ ಹೆಸರನ್ನು ಕೆತ್ತಿಸಿದ್ದಾರೆ. ಅಸ್ಪೃಶ್ಯರ ಸ್ವಾಭಿಮಾನದ ಸಂಕೇತವಾದ ಈ ಘಟನೆಯು ನಮ್ಮೆಲ್ಲರಿಗೂ ಆತ್ಮ ಗೌರವನ್ನು ಎತ್ತಿ ಹಿಡಿಯುವ ದಿನವಾಗಿದೆ.

ಇಂತಹ ಸ್ವಾಭಿಮಾನದ, ಆತ್ಮಗೌರವದ ದಿನವನ್ನು ಶೋಷಿತ ಸಮುದಾಯದವರು ನೆನಪಿಸಿಕೊಂಡು ಅಮರ ವೀರರ ಕೆಚ್ಚೆದೆಯ ಸ್ವಾಭಿಮಾನವನ್ನು ಮೈಗೂಡಿಸಿ ಕೊಳ್ಳ ಬೇಕಾಗಿದೆ. ಅವರ ತ್ಯಾಗ ಬಲಿದಾನದಿಂದ ಮನು ಸಂವಿಧಾನಕ್ಕೆ ಪೆಟ್ಟು ಬಿದ್ದು ಅಸ್ಪೃಶ್ಯರಿಗೆ ವಿದ್ಯಾಭ್ಯಾಸ ನೀಡಲು, ಸೈನ್ಯಕ್ಕೆ ಸೇರಲು, ಸಾಮಾಜಿಕವಾಗಿ ಅಲ್ಪ ಪ್ರಮಾಣದಲ್ಲಿ ನಾಗರೀಕ ಬದುಕು ಕಾಣಲು ಸಾಧ್ಯವಾಗಿದೆ.

ಅಂದು ಅಸ್ಪೃಷ್ಯತೆ ಬ್ರಿಟೀಷರ ಪರವಾಗಿ ಯುದ್ಧ ಮಾಡಿದ್ದು ಅಭಿಮಾನ ಪಡುವ ಸಂಗತಿಯಲ್ಲದಿದ್ದರೂ ಜನಾಂಗಕ್ಕೆ ತಮ್ಮ ಮಕ್ಕಳು ಮುಂದಿನ ಭವಿಷ್ಯ, ಹೊಟ್ಟೆಗೆ ಅನ್ನ ದೊರಕಿಸಿ ಕೊಳ್ಳುವ ಸ್ವಾಭಿಮಾನದಿಂದ ಬದುಕುವ ಉದ್ದೇಶಕ್ಕೆ ತಮ್ಮ ಅಮೂಲ್ಯ ಜೀವವನ್ನು ಅರ್ಪಣೆ ಮಾಡಿದ ನಮ್ಮ ಹುತಾತ್ಮ ಬೀರ ಯೋಧರಿಗೆ ನಾವೆಲ್ಲ ಗೌರವಿಸ ಬೇಕಾಗಿದೆ ಎಂದು ಹೇಳಿದರು. ಹಾಗೂ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿ ಸಾರ್ವಜನಿಕರಿಗೆ ವಿತರಿಸಲಾಯಿತು.

ದಲಿತ ಮುಖಂಡ ಒನ್ನೇಶ್.ಬಿ ಗೋನಾಳ್ ಆಹಿಂದ ಜಿಲ್ಲಾಧ್ಯಕ್ಷರಾದ ತಿಮ್ಮಪ್ಪ ಬಿ.ಗೋನಾಳ ಮಾನಯ್ಯ ಜಿಲ್ಲಾ ಉಪಾಧ್ಯಕ್ಷರು ಛಲವಾದಿ ಮಹಾಸಭಾ ಸಿ.ಹನುಮೇಶ್ ಕಟ್ಟಿಮನಿ ಜಿಲ್ಲಾ ಕಾರ್ಯಧ್ಯಕ್ಷರು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಲೋಕೇಶ್ ಕಪಗಲ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಛಲವಾದಿ ಮಹಾಸಭಾ ವೆಂಕಟೇಶ್ ಜಿಲ್ಲಾ ಜಂಟಿ ಕಾರ್ಯದರ್ಶಿ ಛಲವಾದಿ ಮಹಾಸಭಾ ಡಿ ರಾಮಕೃಷ್ಣ ಜಿಲ್ಲಾ ಕಾರ್ಯದರ್ಶಿ ಛಲವಾದಿ ಮಹಾಸಭಾ ಮಲ್ಲಿಕಾರ್ಜುನ ಬಿ ಗೋನಾಳ ದಲಿತ ಮುಖಂಡರು ಯಲ್ಲಪ್ಪ ಕುಡಿತಿನಿ ದಲಿತ ಮುಖಂಡರು ಮಧುರಾಜ್ ಬಿ ಗೋನಾಳ್ ದಲಿತ ಯುವ ಮುಖಂಡರು ಈ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯ ಮುಖಂಡರು ಹಾಗೂ ಯುವ ಮುಖಂಡರು ಸಾರ್ವಜನಿಕರು ಭಾಗವಹಿಸಿದ್ದರು.

# ಅರ್ಥಪೂರ್ಣ ಹುಟ್ಟು ಹಬ್ಬ ಆಚರಣೆ

## ಶಾಸಕ ಚಿಮ್ಮನಕಟ್ಟಿ ಹುಟ್ಟು ಹಬ್ಬದ ನಿಮಿತ್ತ ವಿಶೇಷ ಅಭಿಷೇಕ, ಪೂಜೆ




**ಗುಳೇದಗುಡ್ಡ :** ಪಟ್ಟಣದ ವಿವಿಧ ಕಡೆಗಳಲ್ಲಿ ಅಭಿಷೇಕ, ಪೂಜೆಯೊಂದಿಗೆ ಬಾದಾಮಿ ಮತಕ್ಷೇತ್ರದ ಶಾಸಕ ಭೀಮಷೇನ ಚಿಮ್ಮನಕಟ್ಟಿ ಅವರ ಹುಟ್ಟು ಹಬ್ಬವನ್ನು ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಬಹಳಷ್ಟು ಅರ್ಥಪೂರ್ಣವಾಗಿ ಆಚರಿಸಿದರು.

ಸಮೀಪದ ಪರ್ವತಿ ಗ್ರಾಮದ ಶ್ರೀಮಾರುತೇಶ್ವರ ದೇವಸ್ಥಾನ ಹಾಗೂ ಹರದೊಳ್ಳಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರ ಹುಟ್ಟು ಹಬ್ಬದ ಅಂಗವಾಗಿ ವಿಶೇಷ ಪೂಜೆ, ಅಭಿಷೇಕ ನೆರವೇರಿಸಲಾಯಿತು. ಬಳಿಕ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು, ಬ್ರೆಡ್, ಹಣ್ಣು, ಕಿಟ್ ವಿತರಿಸಲಾಯಿತು. ಇದಾದ ನಂತರ ಮಾರವಾಡಿ ಗೋಶಾಲೆಯಲ್ಲಿ ಗೋವುಗಳಿಗೆ ಸಜ್ಜಕ, ಮೇವು ವಿತರಿಸಿ ಬಹಳಷ್ಟು ವಿಶಿಷ್ಟವಾಗಿ ಹುಟ್ಟು ಹಬ್ಬ ಆಚರಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜಯ ಬರಗುಂಡಿ, ಪರ್ವತಿ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ ಬೂದಿಹಾಳ, ಯುವ ಮುಖಂಡರಾದ ಕಿರಣ ಸಲಕಿ, ಗಣೇಶ ಹೆಗಡೆ, ದ್ಯಾವಪ್ಪ ಮಾಗಿ, ಶಶಿ ಹಾದಿಮನಿ, ಬಿ.ಎಂ.ಸಂಕನೂರ, ರೆಡ್ಡಿ ನಡುವಿನಮನಿ, ಗಣೇಶ ಬೆಳಗಲ್ಲ, ದಾವಲ್ ಬಾಗವಾನ, ಸುರೇಶ ಕುರಿ, ಪಜ್ಜು ಮಸಬಿನಾಳ, ಶಿವಾಜಿ ಚವ್ಹಾನ, ವೈ.ಬಿ.ಗೌಡರ, ಜಮೀರ ಮೌಲವಿ, ಮುಬಾರಕ ಮಂಗಳೂರು, ಸಂಗಮೇಶ ಕುಂಬಾರ, ದೇವಿ ತಾಂಡೂರ, ಮೂಕಪ್ಪ ಹುನೂರ, ರಾಜು ಹೆಬ್ಬಳ್ಳಿ ಇತರರು ಇದ್ದರು.

**ಬದಾಮಿ ಮತಕ್ಷೇತ್ರದ ಶಾಸಕ ಭೀಮಸೇನ್ ಚಿಮ್ಮನಕಟ್ಟಿ ಬಡವರ, ದೀನ ದಲಿತರ ಆಶಾ ಕಿರಣರು. ಯುವಕರ ಕಣ್ಮಣಿಯಾಗಿದ್ದಾರೆ. ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸಿದ್ದಾರೆ. ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಎಲ್ಲ ಸಮಾಜದ ಏಳಿಗೆಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ.**

**-ಕಿರಣ ಸಲಕಿ, ಕಾಂಗ್ರೆಸ್ ಯುವ ಮುಖಂಡ.**

# ತರಕಾರಿ ಬೆಳೆ, ನರ್ಸರಿ ತರಬೇತಿಗೆ ಅರ್ಜಿ

**ಬಾಗಲಕೋಟೆ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ತರಬೇತಿ ಸಂಸ್ಥೆಯಲ್ಲಿ 18 ರಿಂದ 45 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ, ಯುವತಿಯರಿಗಾಗಿ ಜನವರಿ 16 ರಿಂದ 10 ದಿನಗಳ ಉಚಿತ ತರಕಾರಿ ಬೆಳೆಗಳ ನರ್ಸರಿ ತರಬೇತಿ ಮತ್ತು ಫೆಬ್ರವರಿ 3 ರಿಂದ 13 ದಿನಗಳ ಉಚಿತ ವಾಣಿಜ್ಯ ತೋಟಗಾರಿಕೆ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜನವರಿ 14, 2025 ರೊಳಗಾಗಿ ತರಬೇತಿಗೆ ಹೆಸರನ್ನು ನೋಂದಾಣಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ದೂಸಂ.9980510717, 9483455489ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಶಿಕ್ಷಣಶಾಸ್ತ್ರ ಕೋರ್ಸ್ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಬೆಳಗಾವಿ :** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣಶಾಸ್ತ್ರ (ಎಂ. ಇಡಿ) ಕೋರ್ಸಗೆ ವಿಶ್ವವಿದ್ಯಾಲಯ ಆವರಣ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಪ್ರವೇಶ ಅರ್ಜಿಗಳನ್ನು ಡಿ.18 ರಿಂದ ಆಹ್ವಾನಿಸಿದೆ. ಪ್ರವೇಶಕ್ಕೆ ಅರ್ಜಿ ಸಲ್ಲಿಸಬಯಸುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣ www.rcub.ac.in ದಿಂದ ವಿವರಗಳನ್ನು ಪಡೆದುಕೊಂಡು ಅರ್ಜಿ ಸಲ್ಲಿಸಿ ಪ್ರವೇಶ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ: ಡಾ. ಪುಷ್ಪದಂತ ದಾನಿಗೊಂಡ




**ತೇರದಾಳ :** ಮಕ್ಕಳಿಗೆ ಬರೀ ಪಠ್ಯದಲ್ಲಿಯೇ ಪ್ರಗತಿ ಸಾಧಿಸುವ ಬಗ್ಗೆ ಹೇಳದೆ ಯಾವುದೇ ಕ್ಷೇತ್ರವಿರಲಿ, ಅವರು ಅಭಿರುಚಿ ಹೊಂದಿರುವ ಕ್ಷೇತ್ರದಲ್ಲಿ ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡಿದಾಗ ಅಂತಹ ಪ್ರತಿಭೆಗಳು ಬೆಳೆಯಲು ಸಾಧ್ಯ ಎಂದು ನಗರದ ಪ್ರತಿಷ್ಠಿತ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ಮಹಾವೀರ ದಾನಿಗೊಂಡ ಹೇಳಿದರು.

ಸಂಸ್ಥೆಯ ದಿವಂಗತ ಡಾ. ಸಿದ್ಧಾಂತ ದಾನಿಗೊಂಡ ಸೆಂಟ್ರಲ್ ಸ್ಕೂಲಿನ ಕ್ರೀಡಾಕೂಟದಲ್ಲಿ ವಿಜೇತರಾದ ಸಾಧಕರಿಗೆ ಅಭಿನಂದಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಭಾವಿಸಿದ್ದಾರೆ. ಆದರೆ ಅದು ಸಲ್ಲದು. ಬದಲಾಗಿ ಮಕ್ಕಳಲ್ಲಿನ ಬದಲಾವಣೆ ಕುರಿತು ಸದಾ ಜಾಗೃತಿ ಹೊಂದಿರಬೇಕೆಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಿಕ್ಷಣ ಇಲಾಖೆಯ ಶ್ರೀಶೈಲ ಬುರ್ಲಿ, ಮಕ್ಕಳು ಶಾಲೆಯಲ್ಲಿ ಎಂಟು ಗಂಟೆಯಷ್ಟು ಇದ್ದರೆ ಇನ್ನುಳಿದ ಸಮಯದಲ್ಲಿ ಪಾಲಕರ ವಶದಲ್ಲಿರುತ್ತಾರೆ. ಆದ್ದರಿಂದ ಪಾಲಕರ ಜವಾಬ್ದಾರಿ ಕೂಡ ಬಹಳಷ್ಟು ಇದೆ. ಜತೆಗೆ ಮಕ್ಕಳು ಕಲಿಯುವ ಶಿಕ್ಷಣ ಸಂಸ್ಥೆಯ ಮೇಲೆಯೂ ಮಕ್ಕಳ ಭವಿಷ್ಯ ನಿರ್ಧಾರವಾಗುತ್ತದೆ. ಆ ದಿಶೆಯಲ್ಲಿ ದಾನಿಗೊಂಡ ಶಿಕ್ಷಣ ಸಂಸ್ಥೆಯ ಶಿಕ್ಷಣ ಮಾದರಿ ಆಗಿದೆ ಎಂದು ಬಣ್ಣಿಸಿದರು.

ಪ್ರಾಚಾರ್ಯ ಪ್ರದೀಪ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಸ್ಥೆಯ ಚೇರಮನ್ ಡಾ. ಮಹಾವೀರ ಎಸ್. ದಾನಿಗೊಂಡ ಅಧ್ಯಕ್ಷತೆ ವಹಿಸಿದ್ದರು. ಆಡಳಿತಾಧಿಕಾರಿ ರಾಜೇಂದ್ರ ಪರೀಟ, ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ. ಪಿ. ಬಿ. ಅಪರಾಜ, ಡಾ. ಸಂತೋಷ ಕೃಷ್ಣಾಪುರೆ, ಸಿದ್ದು ಹಾವೋಜಿ ಇನ್ನಿತರರು ಉಪಸ್ಥಿತರಿದ್ದರು.

# ಬೆಟಗೇರಿ ಗ್ರಾಮದ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘಕ್ಕೆ ಅಧ್ಯಕ್ಷರಾಗಿ ಬಸವಂತ ಕೋಣಿ, ಉಪಾಧ್ಯಕ್ಷರಾಗಿ ರೇವಣಸಿದ್ದ ಸವತಿಕಾಯಿ ಆಯ್ಕೆ




**ಬೆಟಗೇರಿ :** ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಗಾಗಿ ಡಿ.26ರಂದು ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಬಸವಂತ ಕೋಣಿ, ನೂತನ ಉಪಾಧ್ಯಕ್ಷರಾಗಿ ರೇವಣಸಿದ್ದ ಸವತಿಕಾಯಿ ಅವಿರೂಧವಾಗಿ ಆಯ್ಕೆಗೊಂಡಿದ್ದಾರೆ.

ಗ್ರಾಮದ ವಿಪ್ರಾಗ್ರಾಕೃಎಸ್ ಸಂಘಕ್ಕೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಸದಸ್ಯರಾಗಿ ನೂತನವಾಗಿ ಆಯ್ಕೆಗೊಂಡ ಚುನಾಯಿತ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಸಹಕಾರ ಇಲಾಖೆಯ ಎಸ್.ಬಿ.ಬಿರಾದಾರ ಪಾಟೀಲ ವಿತರಿಸಿದರು.

ಸಂಘದ ಕಳೆದ ಅವಧಿಯ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಸದಸ್ಯರನ್ನು ಸಂಘದ ಪರವಾಗಿ ಶಾಲು ಹೊದಿಸಿ ಸತ್ಕರಿಸಲಾಯಿತು. ನೂತನವಾಗಿ ಆಯ್ಕೆಗೊಂಡ ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಸದಸ್ಯರ ಸ್ವಾಗತ ಕಾರ್ಯಕ್ರಮ ನಡೆಯಿತು.

ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಬಸವಂತ ಕೋಣಿ ಮಾತನಾಡಿ, ಸಂಘದ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು.

ಈರಯ್ಯ ಹಿರೇಮಠ ಸೇರಿದಂತೆ ಹಲವಾರು ಜನ ಗಣ್ಯರು ಮಾತನಾಡಿದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ಅಡಿವೆಪ್ಪ ಮುರಗೋಡ ಸೇರಿದಂತೆ ಸ್ಥಳೀಯ ರಾಜಕೀಯ ಮುಖಂಡರು, ಹಿರಿಯ ನಾಗರಿಕರು, ಯುವಕರು, ಗ್ರಾಮಸ್ಥರು, ನೂತನವಾಗಿ ಆಯ್ಕೆಗೊಂಡ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಸದಸ್ಯರು, ಸಂಘದ ಸಿಬ್ಬಂದಿ, ಗ್ರಾಮಸ್ಥರು, ಇತರರು ಇದ್ದರು.

# ಗಜೇಂದ್ರಗಡ: 'ವಿಜಯಪತಾಕೆ' ಟೀಸರ್ ಬಿಡುಗಡೆ



**ಗಜೇಂದ್ರಗಡ :** ಶ್ರೀ ಷಣ್ಮುಖಪ್ಪ. ಆರ್.ಎಲ್ ಅವರ ಶ್ರೀ ಬೊಮ್ಮಸಾಗರ ದುರ್ಗಾದೇವಿ ಪ್ರೊಡಕ್ಷನ್ ಚಿತ್ರನಿರ್ಮಾಣ ಸಂಸ್ಥೆಯ ಅಡಿಯಲ್ಲಿ ನಿರ್ಮಾಣವಾಗಿರುವ 'ವಿಜಯಪತಾಕೆ' ಚಲನಚಿತ್ರದ ಪ್ರಥಮ ಟೀಸರ್ ಬಿಡುಗಡೆ ಕುರಿತು ಪತಿಕಾಗೋಷ್ಠಿ ಗಜೇಂದ್ರಗಡದ ಪ್ರವಾಸಿ ಮಂದಿರದಲ್ಲಿ ಜರುಗಿತು.

ಗಜೇಂದ್ರಗಡದವನೇ ಆದ ನಾನು ಈ ಚಿತ್ರದಲ್ಲಿ ನಾಯಕನಾಗಿ ನಟಿಸಿ, ನಿರ್ದೇಶನ ಮಾಡಿದ್ದೇನೆ, 'ವಿಜಯಪಾತಕೆ' ಚಿತ್ರವನ್ನು ಉತ್ತರ ಕರ್ನಾಟಕದವರೇ ನಿರ್ಮಿಸಿದ್ದು, ಉತ್ತರ ಕರ್ನಾಟಕದ ಕಲಾವಿದರೇ ಹೆಚ್ಚು ಅಭಿನಯಿಸಿದ್ದು,ಧಾರವಾಡ ಜಿಲ್ಲೆಯ ನಿಗದಿ, ಬೆಣಕನಕಟ್ಟೆ, ಮುರಕಟ್ಟಿ ಮತ್ತು ಹಳಿಯಾಳ, ದಾಂಡೇಲಿ, ಗದಗ ಜಿಲ್ಲೆಯ ಗಜೇಂದ್ರಗಡ ,ಭೈರಾಪೂರ ಸುತ್ತಮುತ್ತ, ಕೊಪ್ಪಳ ಜಿಲ್ಲೆಯ ಹನುಮಸಾಗರ, ಚಂದಾಲಿಂಗೇಶ್ವರ ದೇವಸ್ಥಾನ, ಮತ್ತು ಇಲಕಲ್ ತಾಲೂಕಿನ ಸುಕ್ಷೇತ್ರ ಸಿದ್ಧನಕೊಳ್ಳ, ಕರಾವಳಿ ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದ್ದು ಚಿತ್ರ ಅತ್ಯುತ್ತಮವಾಗಿ ಮೂಡಿಬಂದಿದೆ. ಇದೀಗ ಉತ್ತರ ಕರ್ನಾಟಕದ ಹೆಸರಾಂತ ಜಾನಪದ ಕಲಾವಿದರಾದ ಮಾಳು ನಿಪನಾಳ ಅವರ ಸಾಮಾಜಿಕ ಜಾಲತಾಣವಾದ ಯೂಟ್ಯೂಬ್ ಜಾಲತಾಣದಲ್ಲಿ ಪ್ರಥಮ ಟೀಸರ್ ಬಿಡುಗಡೆ ಮಾಡಲಾಗುತ್ತಿದೆ ಎಂದು ಯುವ ನಿರ್ದೇಶಕ ಆರ್. ಶೈನ್ ಹೇಳಿದರು.

ಚಿತ್ರದಲ್ಲಿ ನಾಯಕಿಯಾಗಿ ವಾಣಿ ಬಿಜಾಪೂರ , ಮುಖ್ಯ ಖಳನಾಯಕರಾಗಿ ಶೋಭರಾಜ್ ಅಭಿನಯಿಸಿದ್ದಾರೆ. ಇನ್ನುಳಿದಂತೆ ಕಲಾವಿದರಾಗಿ ಹರೀಶ್ ಪತ್ತಾರ, ಆನಂದ. ಕೆ, ಸಂಗನಗೌಡ ಕುರುಡಗಿ, ರಾಜಕುಮಾರ ಪಾಟೀಲ್, ಪಾಲಾಕ್ಷ, ಹುಸೇನ್ ಪತ್ತೇಖಾನ್, ನೇತ್ರಾ, ಅನ್ನಪೂರ್ಣ, ಪ್ರಕೃತಿ, ರಮಜಾನಸಾಬ್ ಉಳ್ಳಾಗಡ್ಡಿ, ಮುಂತಾದವರು ಅಭಿನಯಿಸಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ, ಹಾಗೂ ನಿರ್ದೇಶನ ಆರ್.ಶೈನ್, ಸಂಗೀತ ರಾಘವ್ ಸುಭಾಸ್, ಸಾಹಿತ್ಯ ಸುಭಾಸ್ ಬೆಟಗೇರಿ, ಹಿನ್ನೆಲೆ ಗಾಯನ ಅಭೀಷೇಕ ಎಮ್ ಆರ್( ಕಾಟೇರಾ ಚಿತ್ರ ಖ್ಯಾತಿಯ ಗಾಯಕ) , ಮೇಘನಾ ಹಳಿಯಾಳ ( ಗರಡಿ ಚಿತ್ರದ ಖ್ಯಾತಿಯ ಗಾಯಕಿ ), ಹಾಗೂ ಸಾತ್ವಿಕ. ಛಾಯಾಗ್ರಹಣ ಗಿರೀಶ್ ಶಿರಗೇನಹಳ್ಳಿ, ಭರತ್, ಶ್ಯಾಮ್, ಸಂಕಲನ ರವಿ ರಾಠೋಡ, ಸಾಹಸ ಸಂತೋಷ ರಾಠೋಡ, ನೃತ್ಯ ಕಂಬಿ ರಾಜು, ವರ್ಣಾಲಂಕಾರ ಶ್ರೀಕಾಂತ್ ಕುಲಕರ್ಣಿ, ವಸ್ತ್ರಾಲಂಕಾರ ಸಾವಿತ್ರಿ ರಂಗ್ರೇಜಿ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ,ಡಾ.ವೀರೇಶ ಹಂಡಿಗಿ, ಕ್ರಿಯೇಟಿವ್ ಹೆಡ್ ಸಿ.ಜಿ.ವೆಂಕಟೇಶರಾವ್ ಅವರಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಟೀಸರ್‌ನ ಪೋಸ್ಟರ್ ಕೂಡ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ನಾಯಕಿನಟಿವಾಣಿವಿಜಯಪುರ,ಪಿಆರ್.ಓ ಡಾ.ಪ್ರಭು ಗಂಜಿಹಾಳ,ಸಂಗನಗೌಡ ಕುರುಡಗಿ, ಹರೀಶ ಪತ್ತಾರ, ಜಯದೇವ ಗಂಜಿಹಾಳ ಸೇರಿದಂತೆ ಚಿತ್ರತಂಡದ ಕಲಾವಿದರು ಪಾಲ್ಗೊಂಡಿದ್ದರು.

**ವರದಿ: ಡಾ.ಪ್ರಭು ಗಂಜಿಹಾಳ**

**ಮೊ: 9448775346**

# ಮಹಿಳಾ ವಿವಿಯಲ್ಲಿ ವುಶು ಸ್ಪರ್ಧೆ



**ವಿಜಯಪುರ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಅಂತರ್ ಮಹಿಳಾ ಮಹಾವಿದ್ಯಾಲಯಗಳ ವುಶು ಮತ್ತು ಕುಸ್ತಿಯನ್ನು ಆಯೋಜಿಸಲಾಗಿತ್ತು.

ವಿಶ್ವವಿದ್ಯಾನಿಲಯದ ಕುಲ ಸಚಿವ ಶಂಕರಗೌಡ ಸೋಮನಾಳ ಅವರು ವುಶು ಮತ್ತು ಕುಸ್ತಿ ಸ್ಪರ್ಧೆಯನ್ನು ಉದ್ಘಾಟಿಸಿದರು.

ಡಾಕ್ಟರ್ ವಿಶ್ವನಾಥ ನಡಕಟ್ಟಿ, ಕರ್ನಾಟಕ ವುಶು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಶೋಕ ಮೊಕಾಶಿ, ಖಜಾಂಚಿ ಸಂಗಮೇಶ ಲಾಯದಗುಂದಿ, ವಿಜಯಪುರ ಜಿಲ್ಲಾ ವುಶು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಸವರಾಜ ಬಾಗೇವಾಡಿ ಮತ್ತು ವಿವಿಧ ಮಹಿಳಾ ಮಹಾವಿದ್ಯಾಲಯಗಳಿಂದ ಆಗಮಿಸಿದ ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ತರಬೇತಿದಾರರು ಭಾಗವಹಿಸಿದ್ದರು.

# ಆರೋಗ್ಯ ಸೇವೆಗಳು ಜನರ ಮನೆ ಬಾಗಲಿಗೆ: ಯಶವಂತರಾಯಗೌಡ

**ಇಂಡಿ :** ವಿವಿಧ ಆರೋಗ್ಯ ಸೇವೆಗಳು ಇಂದು ಜನರ ಮನೆ ಬಾಗಿಲಿಗೆ ಬರುತ್ತಿರುವದು ಸಂತೋಷದ ಸಂಗತಿ, ಕ್ಷೇತ್ರದ ಜನತೆ ಆರೋಗ್ಯ ಇಲಾಖೆಯ ಸೇವೆಗಳ ಸದುಪಯೋಗಪಡೆದುಕೊಳ್ಳಬೇಕು ಎಂದು ಶಾಸಕಯಶವಂತರಾಯಗೌಡಪಾಟೀಲರು ಹೇಳಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಯುನಾನಿ ಘಟಕ ಪ್ರಾರಂಭೋತ್ಸವ ಮತ್ತು ಇಂಡಿ ತಾಲೂಕಾ ಆರೋಗ್ಯ ಸೇವೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡುತ್ತಿದ್ದರು.

ಕೆಲ ಚಿಕಿತ್ಸೆ ಸೌಲಭ್ಯಗಳಿಗಾಗಿ ಮಹಾರಾಷ್ಟ್ರದ ಸೋಲಾಪುರ,ಸಾಂಗಲಿ,ಮಿರಜ ಇಲ್ಲವೆ ಜಿಲ್ಲಾ ಕೇಂದ್ರ ವಿಜಯಪುರಕ್ಕೆ ಹೋಗಬೇಕಾಗುತ್ತಿತ್ತು.ಮತ್ತು ಸಾಕಷ್ಟು ಹಣ ಕೂಡ ಖರ್ಚಾಗುತ್ತಿತ್ತು. ಆದರೆ ಈಗ ನಮ್ಮ ಕ್ಷೇತ್ರದಲ್ಲಿ ಎಲ್ಲ ಸೌಲಭ್ಯಗಳು ಸಿಗುತ್ತಿವೆ ಎಂದರು.

ಪ್ರತಿಯೊಬ್ಬರ ಜೀವನದಲ್ಲಿ ಆರೋಗ್ಯವೇ ಭಾಗ್ಯ. ಕಾರಣ ನಮ್ಮ ಜೀವನ ಸುಗಮವಾಗಿ ನಡೆಯಬೇಕಾದರೆ ಆರೋಗ್ಯ ಸರಿಯಾಗಿಇರಬೇಕು. ಹೀಗಾಗಿ ಎಲ್ಲರೂ ಆರೋಗ್ಯ ರಕ್ಷಣೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಕ್ಷೇತ್ರದ ಜನತೆಯ ಆರೋಗ್ಯ ಚೆನ್ನಾಗಿರಬೇಕು ಎಂದರು.




ಜಿಲ್ಲಾ ಆರೋಗ್ಯ ಅಧಿಕಾರಿ ಡಾ॥ ಸಂಪತಕುಮಾರ ಗುಣಾರಿ ಮಾತನಾಡಿ ಆರೋಗ್ಯ ಸೇವೆ ಖಾಸಗಿ ಆಸ್ಪತ್ರೆಗಳಲ್ಲಿ ಬಡವರಿಗೆ ಗಗನ ಕುಸುಮವಾಗಿದೆ. ಈಗ ಸರಕಾರಿ ಆಸ್ಪತ್ರೆಗಳಲ್ಲಿ ಅನೇಕ ಸೌಲಭ್ಯಗಳಿವೆ. ಆಯುಷ್ಮಾನ ಭಾರತ ಆರೋಗ್ಯ ಕಾರ್ಯಕ್ರಮದಲ್ಲಿ ಬಡ ಜನರಿಗೆ ಐದು ಲಕ್ಷದ ವರೆಗೆ ಉಚಿತ ಚಿಕಿತ್ಸೆ ಸಿಗುತ್ತದೆ ಎಂದರು.ಗೃಹ ಆರೋಗ್ಯ ಕಾರ್ಯಕ್ರಮದಲ್ಲಿ ಸಾಂಕ್ರಾಮಿಕ ರೋಗಗಳಿಂದ ಬಳಲುವ ರೋಗಿಗಳಿಗೆ ಮನೆ ಮನೆಗೆ ಹೋಗಿ ಪರೀಕ್ಷೆ ಮತ್ತು ಔಷಧ ಯೋಜನೆಯನ್ನು ಸರಕಾರ ಪ್ರಾರಂಭಿಸಿದೆ. ಸಾರ್ವಜನಿಕರು ಸಹಕರಿಸಿದರೆ ಇನ್ನೂ ಹೆಚ್ಚಿನ ಸೇವೆ ನೀಡುತ್ತೇವೆ ಎಂದರು.

ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ॥ಆರ್.ಎಸ್.ಇಂಗಳೆ ಮಾತನಾಡಿ ಪ್ರಯೋಗಾಲಯ,ರಕ್ತ ಶೇಖರಣಾ ಘಟಕ,ಅತ್ಯಾಧುನಿಕ ಯಂತ್ರಗಳ ಚಾಲನೆ,ಡಿಜಿಟಲ್ ಎಕ್ಸ ರೇ ಯಂತ್ರ,ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕ ಸೇರಿದಂತೆ ಅನೇಕ ಸೌಲಭ್ಯ ಆಸ್ಪತ್ರೆ ಹೊಂದಿದ್ದು ಸಾರ್ವಜನಿಕ ಆಸ್ಪತ್ರೆಯ ಸದುಪಯೋಗ ಪಡೆಯಲು ಕೇಳಿಕೊಂಡರು.ಟಿಎಚ್‌ಓ ಡಾ॥ ಕೃಷ್ಣಕುಮಾರ ಜಾಧವ, ಶಿವಾಜಿ ಮಾನೆ ಮಾತನಾಡಿದರು.

ವೇದಿಕೆಯ ಮೇಲೆ ಆರೋಗ್ಯ ಇಲಾಖೆಯ ನಾಮ ನಿರ್ದೇಶಿತ ಸದಸ್ಯರಾದ ರಾಜು ಪತಂಗೆ, ಸತೀಶ ಕುಂಬಾರ, ಡಾ. ರಾಜಶೇಖರ ತೋಳನೂರ, ಸುದೀರ ಕರಕಟ್ಟಿ, ಪ್ರಭು ನಾಡಗೌಡ, ಜಹಾಂಗೀರ ಸೌದಾಗರ ಮತ್ತಿತರಿದ್ದರು.

ಸಮಾರಂಭದಲ್ಲಿ ಡಾ॥ ರಾಜೇಶ ಕೋಳೆಕರ, ಡಾ॥ ರವಿ ಭತಗುಣಕಿ, ಜಗದೀಶ ಬಿರಾದಾರ, ಪ್ರಸನ್ನ ಗಜಾಕೋಶ, ಶೃತಿ ಕುಂಬಾರ, ಡಾ॥ ಅನೀಲರಾಠೋಡ,ಸತೀಶಧೂಮಗೊಂಡ, ಡಾ॥ ವಿಪುಲ್ ಕೋಳೆಕರ ಮತ್ತಿತರಿದ್ದರು.

# ಪ.ಪಂ. ಕನಕಗಿರಿ: ಮಹಿಳಾ ಸ್ವ-ಸಹಾಯ ಸಂಘಗಗಳಿಂದ ಅರ್ಜಿ ಆಹ್ವಾನ

**ಕೊಪ್ಪಳ :** ಕನಕಗಿರಿ ಪಟ್ಟಣ ಪಂಚಾಯತ ವ್ಯಾಪ್ತಿಯ ಡೇ-ನಲ್ಮ್ ಅಭಿಯಾನದಡಿ ಆಸ್ತಿ ತೆರಿಗೆ ಮತ್ತು ನೀರಿನ ತೆರಿಗೆ ಸಮರ್ಪಕ ವಸುಲಾತಿಗಾಗಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಚಿಸಲಾಗಿರುವ ಮಹಿಳಾ ಸ್ವ-ಸಹಾಯ ಸಂಘಗಳನ್ನು ತೊಡಗಿಸಿಕೊಂಡು ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸುಲಾತಿ ಮಾಡುವುದಕ್ಕಾಗಿ ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕನಕಗಿರಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ನೀರಿನ ಬಳಕೆಯ ಶುಲ್ಕದ ಹಿಂದಿನ ಬಾಕಿ ಮೊತ್ತ ಬಡ್ಡಿ ಸಹಿತವಾಗಿ ಮತ್ತು ಪ್ರಸಕ್ತ ವಾರ್ಷಿಕ ಸಹಿತ ವಸೂಲಿ ಮಾಡುವುದು ಹಾಗೂ ಬಹುದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ವಾರ್ಷಿಕ ಬೇಡಿಕೆಗೆ ಅನುಗುಣವಾಗಿ ಸಮರ್ಪಕವಾಗಿ ವಸೂಲಿ ಮಾಡಲು ಸ್ಥಳೀಯ ಮಹಿಳಾ ಸ್ವ-ಸಹಾಯ ಗುಂಪುಗಳ ಸೇವೆಯನ್ನು ಪಡೆದು ವಸೂಲಾದ ಮೊತ್ತದಲ್ಲಿ ಶೇ.5ರಷ್ಟನ್ನು ಪ್ರೋತ್ಸಾಹಧನವನ್ನು ಸ್ವ-ಸಹಾಯ ಗುಂಪುಗಳಿಗೆ ನೀಡಲಾಗುವುದು.

ಅರ್ಹತೆಗಳು: ಮಹಿಳಾ ಸ್ವ-ಸಹಾಯ ಸಂಘವು ಡೇ-ನಲ್ಮ್ ಅಭಿಯಾನದಡಿ ನೋಂದಾಯಿಸಿರಬೇಕು. ಹಾಗೂ ಪಂಚಸೂತ್ರಗಳನ್ನು ಅನುಸರಿಸುತ್ತಿರಬೇಕು. ಸಂಘಗಳ ಸದಸ್ಯರು ಕನಿಷ್ಠ 7 ನೇ ತರಗತಿ ವರೆಗೆ ಶಿಕ್ಷಣ ಹಾಗೂ ಎಲೆಕ್ಟ್ರಾನಿಕ್ ಪರಿಕರಗಳನ್ನು ಬಳಸುವ ಸಾಮರ್ಥ್ಯ ಹೊಂದಿರಬೇಕು. ಸ್ವ-ಸಹಾಯ ಸಂಘವು ಸಂಘದ ಹೆಸರಿನಲ್ಲಿ ಸಕ್ರಿಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು ಬ್ಯಾಂಕಿನ ಮೂಲಕ ಅಥವಾ ಆಂತರಿಕಾ ಸಾಲ ಪಡೆದು ನಿಯಮಿತ ಸಾಲ ಮರುಪಾವತಿ ಮಾಡಿರಬೇಕು. ಸ್ವ-ಸಹಾಯ ಗುಂಪು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಡೇ-ನಲ್ಮ್ ಅಭಿಯಾನದಡಿ ನೋಂದಾಯಿಸಿಕೊಂಡು ಮಾನ್ಯತೆ ಇರುವ ಎಂಐಎಸ್ ಕೋಡ್ ಹೊಂದಿರಬೇಕು. ಸ್ವ-ಸಹಾಯ ಗುಂಪು ರಚನೆಯಾಗಿ ಕನಿಷ್ಠ 3 ವರ್ಷ ಪೂರೈಸಿರಬೇಕು.

ಸ್ವ- ಸಹಾಯ ಗುಂಪು ಮತ್ತು ಗುಂಪಿನ ಸದಸ್ಯರ ಯಾವುದೇ ಅಪರಾಧ ಅಥವಾ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಹಿನ್ನೆಲೆಯನ್ನು ಹೊಂದಿರಬಾರದು. ಪಟ್ಟಣ ಪಂಚಾಯತಿಯಿಂದ ನಿಗಧಿಪಡಿಸಲಾದ ಆಸ್ತಿ ತೆರಿಗೆ ಮತ್ತು ನೀರಿ ಶುಲ್ಕ ವಸೂಲಾತಿ ಗುರಿಗೆ ಕಾರ್ಯನಿರ್ವಹಿಸಲು ಆಸಕ್ತಿ ಮತ್ತು ಬದ್ಧತೆಯನ್ನು ಹೊಂದಿರಬೇಕು.

ಆಸಕ್ತ ಮಹಿಳಾ ಸ್ವ-ಸಹಾಯ ಗುಂಪುಗಳು ನಿಗದಿತ ಅರ್ಜಿ ನಮೂನೆಯನ್ನು ಪಟ್ಟಣ ಪಂಚಾಯತ ಕಾರ್ಯಾಲಯ ಕನಕಗಿರಿ ಇಲ್ಲಿ ಪಡೆದು ಭರ್ತಿ ಮಾಡಿ ಡಿಸೆಂಬರ್ 30 ರೊಳಗಾಗಿ ಈ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಕನಕಗಿರಿ, ಡೇ-ನಲ್ಮ್ ವಿಭಾಗ ರವರನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು ಎಂದು ಪ.ಪಂ. ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿದ್ಧೇಶ್ವರ ಶ್ರೀ ಜನಮಾನಸದಲ್ಲಿ ಅಚ್ಚಳಿಯದ ಉಳಿದ ಮಹಾನ ಚೇತನರು: ಡಾ. ವೃಷಭ ದೇವ ಶರ್ಮಾ

**ವಿಜಯಪುರ :** ವಿಜಯಪುರವು ಪುಣ್ಯ ಭೂಮಿ. ಇಲ್ಲಿ ಬಸವಾದಿ ಪ್ರಮತರಂತೆ ಸಮಾಜಕ್ಕೆ ಒಳಿತನ್ನು ಹಾಗೂ ಇಡೀ ಮಾನವ ಕುಲಕ್ಕೆ ಪರೋಪಕಾರಿಯಾಗಿ, ತ್ಯಾಗಜೀವಿಯಾಗಿ,ನಿರಾಭಾರಿಯಾಗಿ ಭರತ ಖಂಡದ ಜನಮಾನಸದಲ್ಲಿ ಅಚ್ಚಳಿಯದೇ ಉಳಿದ ಮಹಾನ ಚೇತನರಲ್ಲಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಒಬ್ಬರಾಗಿದ್ದಾರೆ ಎಂದು ಹೈದರಾಬಾದ ನಿವೃತ್ತ ಪ್ರಾಧ್ಯಾಪಕ ಡಾ. ವೃಷಭ ದೇವ ಶರ್ಮಾ ಅವರು ಹೇಳಿದರು.

ಕೆ.ಪಿ.ಎಮ್.ಇ. ಸಂಸ್ಥೆಯ ಚಾಣಕ್ಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ವಿಜಯಪುರ ಹಾಗೂ ಚಾಣಕ್ಯ ಕರಿಯರ್ ಅಕಾಡೆಮಿ, ವಿಜಯಪುರ ಇವರ ಸಂಯುಕ್ತ ಆಶ್ರಯದಲ್ಲಿ ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ಗುರುನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿದ್ದೇಶ್ವರ ಶ್ರೀಗಳ ಪ್ರವಚನಗಳು ಇಂದು ಭಾರತದ ಹಲವಾರು ಭಾಷೆಗಳಲ್ಲಿ ಅನುವಾದವಾಗಿವೆ. ಇಂತಹ ಮಹಾನ ಚೇತನರು ಶತಮಾನಕೊಮ್ಮೆ ಅವತರಿಸುತ್ತಾರೆ. ನಮ್ಮ ಜನರು ಕೊಡುವವರುಂಟು ಬೇಡುವವರು ಇಲ್ಲ. ಎತ್ತರದ ತೇಜ ಪುಂಜ ಅಸಾಧಾರಣವಾಗಿ ಬ್ರಹ್ಮಾಂಡದತ್ತ ತಮ್ಮ ವಿಚಾರಗಳಿಂದ ನಿರಾಭಾರಿಯಾಗಿ ಬದುಕಿದವರು. ಸಿದ್ದೇಶ್ವರ ಶ್ರೀಗಳ ವ್ಯಕ್ತಿತ್ವವನ್ನು ಪರಿಚಯಿಸಲು ಬ್ರಹ್ಮಾಂಡದಷ್ಟೇ ಸಂಕಿರಣವಾದದ್ದು. ಎಲ್ಲರೂ ಧರ್ಮ, ಪರೋಪಕಾರ, ಮಾನವೀಯ ಮೌಲ್ಯ, ಪ್ರೀತಿ ಹಾಗೂ ಸತ್ಯ ಮಕ್ಕಳ ತಲೆಯಲ್ಲಿ ಹೇಗೆ ಬಿತ್ತಬೇಕು ಎಂಬುದರ ಬಗ್ಗೆ ಸಿದ್ಧೇಶ್ವರ ಶ್ರೀಗಳ ಪ್ರವಚನಗಳು ಸರ್ವಕಾಲಿಕ ಸತ್ಯವಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.



ಧಾರವಾಡ ಜೆಎಸ್‌ಎಸ್ ಪದವಿ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಗೋವಿಂದರಾಜ ತಳಕೋಡ ಮಾತನಾಡಿ, ಸಿದ್ಧೇಶ್ವರ ಮಹಾಸ್ವಾಮಿಗಳ ವಿಚಾರ ಸಾಗರದಷ್ಟು ವಿಶಾಲ, ಆಕಾಶದಷ್ಟು ವಿಸ್ತಾರವಾದವುಗಳು. ರೈತ ಬೆಳೆದ ಹತ್ತಿ, ಕುಂಬಾರ ಮಾಡಿದ ಹಣತೆ, ಗಾಣಿಗ ತಯಾರಿಸಿದ ಎಣ್ಣೆಗೆ ಬೆಲೆ ಬರುವುದು ಸಿದ್ಧೇಶ್ವರ ಮಹಾಸ್ವಾಮಿಗಳಂತಹ ಜ್ಯೋತಿ ಬೆಳಗಿದಾಗ ಮಾತ್ರ. ಸಿದ್ಧೇಶ್ವರ ಸ್ವಾಮಿಗಳ ಸಮಕಾಲೀನರಾಗಿ ಜನಿಸಿದ ನಾವುಗಳೇ ಧನ್ಯರು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ವಿಚಾರ ಸಂಕಿರಣದಲ್ಲಿ ಮಂಡನೆಗೊಳ್ಳುವ ಲೇಖನಗಳನ್ನು ಡಾ. ಎಸ್.ಟಿ. ಮೇರವಾಡೆ ಹಾಗೂ ಡಾ. ಆರ್.ವ್ಹಿ. ಪಾಟೀಲ ಸಂಪಾದಿಸಿದ ಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ಜೀವನ-ಸಾಹಿತ್ಯ-ತತ್ವದರ್ಶನ ಗ್ರಂಥ ಲೋಕಾರ್ಪಣೆಗೊಳಿಸಲಾಯಿತು.ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಜ್ಞಾನಯೋಗಾಶ್ರಮದ ಪರಮ ಪೂಜ್ಯ ಶ್ರೀ ಬಸವಲಿಂಗ ಮಹಾಸ್ವಾಮಿಗಳು ವಹಿಸಿದ್ದರು.

ಚಾಣಕ್ಯ ಕರಿಯರ್ ಅಕಾಡೆಮಿಯ ಸಂಸ್ಥಾಪಕ ಎನ್.ಎಮ್.ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಚಾಣಕ್ಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಟಿ. ಮೇರವಾಡೆ ಸ್ವಾಗತಿಸಿದರು. ಡಾ. ಎಸ್.ಜೆ.ಜಹಾಗೀರದಾರ ಪರಿಚಯಿಸಿದರು. ಪ್ರೊ. ಜಿ.ಎಸ್. ಬಗಲಿ ವಂದಿಸಿದರು.

ಒಂದನೇ ಗೋಷ್ಠಿಯಲ್ಲಿ ಪ್ರೊ. ಜಿ.ಆರ್. ಅಂಬಲಿ ಅವರು ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ಜೀವನ ಕುರಿತು, ಮನು ಪತ್ತಾರ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ಸಾಹಿತ್ಯ ಕುರಿತು, ಶಿವಶರಣಪ್ಪ ಶಿರೂರು ಅವರು ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ತತ್ವದರ್ಶನ ಕುರಿತು ಮಾತನಾಡಿದರು.

ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಪಿ.ವ್ಹಿ. ಹಳಕಟ್ಟಿ ನಿವೃತ್ತ ಪ್ರಾಧ್ಯಾಪಕಿ ವಹಿಸಿದ್ದರು. ನಂತರ ಪ್ರಾಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಸಿದ್ಧೇಶ್ವರ ಶ್ರೀಗಳ ಪ್ರವಚನಗಳಲ್ಲಿ ವಿವಿಧ ಆಯಾಮಗಳ ಕುರಿತು ಪ್ರಬಂಧ ಮಂಡಿಸಲಾಯಿತು. ಈ ಪ್ರಬಂಧ ಮಂಡನೆಯಲ್ಲಿ ಡಾ. ಗೋವಿಂದರಾಜ ತಳಕೋಡ ಹಾಗೂ ಡಾ. ಎಸ್. ಜೆ. ಜಹಾಗೀರದಾರ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು.

ಸಮಾರೋಪ ಸಮಾರಂಭದಲ್ಲಿ ಪ್ರೊ. ಎಸ್. ಎಸ್. ತೇರದಾಳ, ಪ್ರೊ. ಆರ್. ವ್ಹಿ. ಪಾಟೀಲ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ. ಎಸ್.ಟಿ. ಮೇರವಾಡೆ ವಹಿಸಿದ್ದರು. ಸಂಗು ಸಜ್ಜನ ಹಾಗೂ ಮಹಾವಿದ್ಯಾಲಯದ ಪ್ರಾಧ್ಯಾಪಕರ ವೃಂದ, ಚಾಣಕ್ಯ ಕರಿಯರ್ ಅಕಾಡೆಮಿ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಜರಿದ್ದರು.

## ಶಾಸಕ ಭೀಮಸೇನ ಚಿಮ್ಮನಕಟ್ಟಿ ಹುಟ್ಟು ಹಬ್ಬ: ರೋಗಿಗಳಿಗೆ ಹಣ್ಣು ಹಂಪಲು ವಿತರಣೆ



**ಬಾದಾಮಿ :** ಮಾಜಿ ಸಚಿವರ ಸುಪುತ್ರ ಬಾದಾಮಿ ಮತಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರ 42ನೇ ಹುಟ್ಟು ಹಬ್ಬದ ಅಂಗವಾಗಿ ನಗರದ ತಾಲೂಕ ಸರ್ಕಾರಿ ಆಸ್ಪತ್ರೆಯಲ್ಲಿ ತಾಲೂಕ ಸಾರ್ವಜನಿಕ ಆರೋಗ್ಯ ರಕ್ಷಾ ಸಮಿತಿ ಸದಸ್ಯರು ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಯೋಗಕ್ಷೇಮ ವಿಚಾರಿಸಿದರು.

ಈ ಸಂದರ್ಭದಲ್ಲಿ ಪ್ರಕಾಶ ನಡಮನಿ, ಅಶೋಕ ಕೋಟನಕರ, ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ವಿ.ಕೆ ಶೆಟ್ಟರ, ದಂತ ವೈದ್ಯ ಜಯಂತ, ವೆಂಕಟೇಶ ಮೇದಾರ, ಡಾ.ಎಸ್.ಬಿ ಉಡಚಂಚಿ, ವಿನಾಯಕ ಕಿತ್ತೂರ, ಮಲ್ಲಿಕಾರ್ಜುನ ಮೇಟಿ, ದುರ್ಗಪ್ಪ ವಡ್ಡರ, ಮಮತಾಜ ಉಕ್ಕಲಿ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು.

## ಪ್ರವಾಸೋದ್ಯಮ, ಆತಿಥ್ಯಕ್ಷೇತ್ರದಲ್ಲಿ ತರಬೇತಿ

**ಬಾಗಲಕೋಟೆ :** ಪ್ರವಾಸೋದ್ಯಮ ಇಲಾಖೆಯು ಪ್ರಸಕ್ತ ಸಾಲಿಗೆ ಪ್ರವಾಸೋದ್ಯಮ, ಆತಿಥ್ಯಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿಗೆ ಸೇರಿದ 292, ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಆತಿಥ್ಯಕ್ಷೇತ್ರದ ಸಂಸ್ಥೆಗಳಾದ ಫುಡ್‌ಕ್ರಾಫ್ಟ್ ಇನ್ಸಿಟ್ಯೂಟ್ ಮೈಸೂರು ಹಾಗೂ ಇನ್ಸಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜಮೆಂಟ್ ಬೆಂಗಳೂರು ಮೂಲಕ ವಸತಿ ಸಹಿತ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಕಾರ್ಯಕ್ರಮದಡಿ ಫುಡ್ & ಬೆವರೇಜ್ ಸರ್ವಿಸ್ ಸ್ಟೇವರ್ಡ(ಕನಿಷ್ಟ 10ನೇ ತರಗತಿ-ಉತ್ತೀರ್ಣ), ರೂಮ್ ಅಟೆಂಡೆಂಟ್ (5ನೇ ತರಗತಿ ಪಾಸಾಗಿರಬೇಕು), ಫ್ರಾಂಟ್ ಆಫೀಸ್ ಅಸೋಶಿಯೇಟ್ (12ನೇ ತರಗತಿಉತ್ತೀರ್ಣ), ಮಲ್ಟಿ ಕೌಜನ್‌ಕೂಕ್ (8ನೇ ತರಗತಿಉತ್ತೀರ್ಣ) ವಿಭಾಗದಲ್ಲಿ ತರಬೇತಿ ನೀಡಲಾಗುತ್ತಿದ್ದು, ಕನಿಷ್ಟ 20 ರಿಂದ 45 ವರ್ಷದೊಳಗಿರಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನ ಡಿಸೆಂಬರ 28 ಆಗಿದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ದೂಸಂ.08354-235709 ಇವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## ಶುಲ್ಕ ಮರುಪಾವತಿಗೆ ಅರ್ಜಿ ಅವಧಿ ವಿಸ್ತರಣೆ

**ಬಾಗಲಕೋಟೆ :** ಮೆಟ್ರಿಕ್ ನಂತರದ ಕೋರ್ಸಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, ಪ್ರಸಕ್ತ ಸಾಲಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮದ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಫೆಬ್ರವರಿ 15, 2025 ವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಎಂ.ಎಂ. ತುಂಬರಮಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-236419ಗೆ ಸಂಪರ್ಕಿಸಬಹುದಾಗಿದೆ.

# ಧರ್ಮ ಬೆಳೆಸಲು ಸಂಕುಚಿತ ಮನೋಭಾವದಿಂದ ಹೊರಬನ್ನಿ




**ಬಾಗಲಕೋಟೆ :** ಮನೆ, ಮನೆಗಳಲ್ಲಿ ಧರ್ಮ ಬೆಳೆಯಬೇಕೆಂದರೆ ಅದರ ಬಗ್ಗೆ ಇರುವ ಸಂಕುಚಿತ ಮನೋಭಾವದಿಂದ ಹೊರಬರಬೇಕೆಂದು ಯುವಾತ್ಮ ಸಂಘಟನೆಯ ಮಾರ್ಗದರ್ಶಕ ಪಂ. ವಿದ್ಯಾಧೀಶಾಚಾರ್ಯ ಗುತ್ತಲ ಕರೆ ನೀಡಿದರು.

ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಬಾಗಲಕೋಟೆ ಭೇಟಿ ಪ್ರಯುಕ್ತ ಶ್ರೀಗಳ ಉಪಸ್ಥಿತಿಯಲ್ಲಿ ಜರುಗಿದ ಯುವಗೋಷ್ಠಿಯಲ್ಲಿ ಅವರು ವಿಶೇಷ ಪ್ರವಚನ ನೀಡಿದರು.

ಮಕ್ಕಳು, ಮೊಮ್ಮಕ್ಕಳಲ್ಲಿ ಧರ್ಮದ ಬಗ್ಗೆ ಭಯ ಹುಟ್ಟಿಸುವ ಕೆಲಸವಾಗಬಾರದು ಅದರ ಬದಲಾಗಿ ಧರ್ಮಾಚರಣೆಗೆ ಇರುವ ಸುಲಭದ ಉಪಾಯಗಳ ಬಗ್ಗೆ ತಿಳಿಹೇಳಬೇಕೆಂದು ಕರೆ ನೀಡಿದರು.

ಧರ್ಮವನ್ನು ಇಂದು ಸಂಕುಚಿತ ಭಾವದಿಂದ ಕಾಣಲಾಗುತ್ತಿದೆ. ಪೂಜೆ ಮಾಡುವುದೊಂದೇ ಧರ್ಮವಲ್ಲ ಸಮಾಜದ ಅಭಿವೃದ್ಧಿ, ಕಲ್ಯಾಣ, ಪರೋಪಕಾರದ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಸಲಹೆ ಮಾಡಿದರು.

ಮನೆಗಳಲ್ಲಿ ನಿತ್ಯಸಂಧ್ಯಾವಂದನೆ ಮಾಡಬೇಕು. ಅದ-ರಿಂದ ದೂರವಾಗಿ ದೇವರು ಯಾಕೆ ಬೇಕು ಎಂದು ಕೇಳುವಷ್ಟರ ಮಟ್ಟಿಗೆ ಸಮಾಜ ಸಂಕುಚಿತ ಭಾವಕ್ಕೆ ತೆರಳಬಾರದು. ಧರ್ಮ ರಕ್ಷಣೆಗೆ ಯವಶಕ್ತಿಯ ಲೇಪನವಾಗಬೇಕಿದೆ ಎಂದರು.

ಒಂದು ಕಾಲದಲ್ಲಿ ಎಲ್ಲದಕ್ಕೂ ದೇಶವನ್ನು ದೋಷಿಸಲಾಗುತಿತ್ತು. ಆದರೆ ದೇಶಕ್ಕೆ ಇರುವ ಸಮಸ್ಯೆಗಳನ್ನು ಅರಿತು ಅದಕ್ಕೆ ಪರಿಹಾರ ಹುಡುಕುವ ಕೆಲಸ ಯುವಜನಾಂಗದಿಂದ ನಡೆಯಿತು ಅಂತೆಯೇ ಧರ್ಮಕ್ಕೆ ಸಂಕಟ ಬಂದರೆ ದೂರುವುದನ್ನು ನಿಲ್ಲಿಸಿ ಪರಿಹಾರ ಕಂಡು ಹಿಡಿಯುವ ಕೆಲಸವನ್ನು ಯುವಸಮೂಹ ಮಾಡಬೇಕೆಂದರು. ಧರ್ಮ ಮತ್ತು ಧಾಮಿರ್ಕತೆಯಲ್ಲಿ ನಾವೀನ್ಯತೆಬೇಕು. ಧರ್ಮ ಶಾಶ್ವತ ಅದನ್ನು ಬೆಳೆಸುವ ಕೆಲಸವಾಗಬೇಕು. ಧಾರ್ಮಿಕತೆಯಲ್ಲಿ ಯುವಕರು ಬೆರೆಯದಿದ್ದರೆ ಧರ್ಮ ಉಳಿಯುವುದು ಕಷ್ಟವಾಗಲಿದೆ ಎಂದರು.

ಸಭೆಯ ಕೊನೆಯಲ್ಲಿ ಉತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಭಾಗವತದ ಕುರಿತಾಗಿ ಪ್ರವಚನ ನೀಡಿದರು. ಆತ್ಮಾಶ್ರಮದ ರಾಘವೇಂದ್ರಾಚಾರ್ಯ ರಾಚೂರಿ ಅವರೂ ಪ್ರವಚನ ನೀಡಿದರು.

ಶ್ರೀಗಳಿಗೆ ಬಾಗಲಕೋಟೆ ವಿಪ್ರ ಸಮಾಜದಿಂದ ಸಂಗ್ರಹಿಸಿದ ದೇಣಿಗೆಯನ್ನು ಸಮರ್ಪಿಸಲಾಯಿತು.

ಪಂ. ಆನಂದತೀರ್ಥಾಚಾರ್ಯ ನಾಗಸಂಪಿಗೆ, ಪಂ. ರಘೋತ್ತಮಾಚಾರ್ಯ ನಾಗಸಂಪಿಗೆ, ಪಂ. ವಿಜಯೇಂದ್ರಾಚಾರ್ಯ ಕಂಚಿ, ಪಂ. ವಾದಿರಾಜಾಚಾರ್ಯ ಕಂಚಿ, ಪಂ. ಭೀಮಸೇನಾಚಾರ್ಯ ಪಾಂಡುರಂಗಿ, ಪಂ. ಬಿಂದುಮಾಧವಾಚಾರ್ಯ ನಾಗಸಂಪಿಗೆ, ಪಂ. ವಿಜಯೇಂದ್ರಾಚಾರ್ಯ ನಾಗಸಂಪಿಗೆ, ಪಂ. ವಿಜಯೇಂದ್ರಾಚಾರ್ಯ ಯತ್ನಟ್ಟಿ, ಪಂ. ನವೀನಾಚಾರ್ಯ ಜೋಶಿ, ಪಂ. ಆದಿಶೇಷಾಚಾರ್ಯ ಯಲಗೂರ, ಪಂ. ಉಡುಪಿ ಕೃಷ್ಣಾಚಾರ್ಯ ಗುಮಾಸ್ತೆ, ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಳ್ಳಿ: ಎ.ಕೆ.ಬಸಣ್ಣವರ

**ಚಿಮ್ಮಡ :** ಮಕ್ಕಳು ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳುವ ಜೊತೆಗೆ ದೇಶದ ಜವಾಬ್ದಾರಿಯುತ ನಾಗರಿಕರಾಗಿ ಹೊರಹೊಮ್ಮಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ.ಕೆ.ಬಸಣ್ಣವರ ಹೇಳಿದರು.

ಸಮೀಪದ ಯರಗಟ್ಟಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಧ್ವನಿವರ್ಧಕಗಳ ನಿಷೇಧ ಸೂಚನಾ ಫಲಕಗಳ ಉದ್ಘಾಟನೆ, ಅಪರಾಧ ತಡೆ ಮಾಸಾಚರಣೆ, ಗುಣಮಟ್ಟದ ಶಿಕ್ಷಣ ಹಾಗೂ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪ್ರೇರಣಾ ಕಾರ್ಯಾಗಾರದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು. ಗ್ರಾಮದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಎಸ್.ಡಿ.ಎಮ್.ಸಿ.ಯವರು ಹಾಗೂ ಗ್ರಾಮ ಪಂಚಾಯತಿಯವರು ಕ್ರಮ ವಹಿಸಬೇಕೆಂದು ಮನವಿ ಮಾಡಿದರು. ಗುಣಾತ್ಮಕ ಶಿಕ್ಷಣದ ಕುರಿತು ಉದಾಹರಣೆಗಳೊಂದಿಗೆ ವಿವರಿಸಿದ ಅವರು ಸರಕಾರದಿಂದ ಶಾಲಾ ಮಕ್ಕಳಿಗೆ ಕೊಡಮಾಡುವ ಉಚಿತ ಸೌಲಭ್ಯಗಳನ್ನು ಮಕ್ಕಳಿಗೆ ಸರಿಯಾಗಿ ತಲುಪಿಸಬೇಕು, ಶಾಲಾ ಆವರಣದ ಸ್ವಚ್ಚತೆ, ಮಕ್ಕಳ ಸುರಕ್ಷತೆ ಹಾಗೂ ವೈಯಕ್ತಿಕ ಸ್ವಚ್ಚತೆ ಕಾಪಾಡಿಕೊಳ್ಳಬೇಕೆಂದು ಪುನರುಚ್ಚರಿಸಿದರು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬನಹಟ್ಟಿ ಪೋಲಿಸ್ ಠಾಣಾಧಿಕಾರಿ ಶ್ರೀಮತಿ ಶಾಂತಾ ಎನ್. ಹಳ್ಳಿ ಮಾತನಾಡಿ ಮಕ್ಕಳು ರಸ್ತೆ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು, ಸಕ್ಕರೆ ಕಾರ್ಖಾನೆಗಳು ಪ್ರಾರಂಭವಿರುವುದ-ರಿಂದ ರಸ್ತೆಯಲ್ಲಿ ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳ ಸಂಖ್ಯೆ ಗಣನೀಯವಾಗಿದ್ದು ಅಪಾಯದ ಮಟ್ಟದಲ್ಲಿ ಸಾಗುತ್ತಿರುವುದರಿಂದ ಮಕ್ಕಳು ಹಾಗೂ ಸಾರ್ವಜನಿಕರು ಎಚ್ಚರಿಕೆಯಿಂದ ಚಲಿಸಬೇಕೆಂದು ಕೇಳಿಕೊಂಡರು. ಹೆಣ್ಣುಮಕ್ಕಳ ಸುರಕ್ಷತೆ ಕುರಿತು ಮಾತನಾಡಿದ ಅವರು ಶಾಲೆ, ಸಮಾಜ, ಸ್ಥಳೀಯ ಸಂಸ್ಥೆಗಳು ಹೆಣ್ಣುಮಕ್ಕಳ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸಲು ಮನವಿ ಮಾಡಿದರು. ಪೋಕ್ಸೊ ಕಾಯ್ದೆ ಕುರಿತು ಮಾತನಾಡಿದ ಅವರು ಚಿಕ್ಕಮಕ್ಕಳು ದೌರ್ಜನ್ಯಕ್ಕೊಳಗಾಗದಂತೆ ಎಚ್ಚ-ರಿಕೆ ನೀಡಿದರು.ಶಾಲೆಗಳು ಜೀವಂತ ದೇವಾಲಯಗಳಾಗಿರುವುದ-ರಿಂದ ಸುತ್ತಮುತ್ತಲೂ ಸ್ವಚ್ಚತೆ ಹಾಗೂ ಪರಿಶುದ್ಧ ವಾತಾವರಣದ ಅವಶ್ಯಕತೆಯಿದೆ ಎಂದರು.

ಪ್ರಾಥಮಿಕ ಶಾಲೆಯ ಮುಖ್ಯಗುರುಮಾತೆ ಶ್ರೀಮತಿ ಎಮ್.ಐ. ಚಿತ್ರಭಾನುಕೋಟಿ ಮಾತನಾಡಿ ಶಾಲೆಯ ಮೂಲಭೂತ ಸೌಕರ್ಯಗಳ ಕೊರತೆಯ ಕುರಿತು ಎಲ್ಲರ ಗಮನ ಸೆಳೆದರು.

ಪ್ರೌಢ ಶಾಲೆಯ ಸಹ ಶಿಕ್ಷಕರಾದ ಉತ್ತಮಕುಮಾರ ಮಗದುಮ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂಧರ್ಬದಲ್ಲಿ ಪ್ರೌಢ ಶಾಲೆಯ ಎಸ್.ಡಿ.ಎಮ್.ಸಿ. ಅಧ್ಯಕ್ಷೆ ಶ್ರೀಮತಿ ಶಾಂತವ್ವ ಕಂಕಣವಾಡಿಯವರು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿದ ಧ್ವನಿವರ್ಧಕ ನಿಷೇಧ ಸೂಚನಾ ಫಲಕಗಳನ್ನು ಅಳವಡಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶಾಂತವ್ವ ಕಂಕಣವಾಡಿ ವಹಿಸಿದ್ದರು,ಮಧ್ಯಾಹ್ನ ಉಪಹಾರ ಯೋಜನೆಯ ಸಹಾಯಕ ನಿರ್ದೇಶಕರಾದ ಕಲ್ಯಾಣಿ, ಕಿರಣ ಲೋಕಾಪೂರ, ಪ್ರೌಢ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯೆ ಐ.ಡಿ. ನದಾಫ್, ಸಿ.ಆರ್.ಪಿ. ಕೊಕಟನೂರ, ಪ್ರಾಥಮಿಕ ವಿಭಾಗದ ಎಸ್.ಡಿ.ಎಮ್.ಸಿ. ಅಧ್ಯಕ್ಷರಾದ ಶ್ರೀ ಮಹಾದೇವ ಸನದಿ ಉಪಸ್ಥಿತರಿದ್ದರು. ಶ್ರೀಮತಿ ಎಸ್.ಹೆಚ್.ರಾಮದುರ್ಗ ಕಾರ್ಯಕ್ರಮ ನಿರೂಪಿಸಿದರು. ಪಿ.ಬಿ.ಮೆಕ್ಕಳಕಿ ವಂದಿಸಿದರು.

## ನಾಟಿ ಕೋಳಿ ಮರಿಗಳಿಗೆ ಉಚಿತವಾಗಿ ವಿತರಿಸಲು ಅರ್ಜಿ ಆಹ್ವಾನ

**ಬಾಗಲಕೋಟೆ:** ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ 2024-25ನೇ ಸಾಲಿನಲ್ಲಿ ಐದುವಾರದ ನಾಟಿ ಕೋಳಿ ಮರಿಗಳನ್ನು ಅರ್ಹ ಗ್ರಾಮೀಣ ರೈತ ಮಹಿಳೆಯರಿಗೆ ಉಚಿತವಾಗಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸಲ್ಲಿಸಲು ಕೊನೆ ದಿನ ಡಿಸೆಂಬರ 30 ಆಗಿದೆ.ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಸಾಮಾನ್ಯ ವರ್ಗದ ರೈತ ಮಹಿಳೆಯರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಪಶು ಇಲಾಖೆಯ ಉಪನಿರ್ದೇಶಕ ಎಸ್.ಎಚ್.ಕರಡಿಗುಡ್ಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಮುಖ್ಯ ಪಶುವೈದ್ಯಾಧಿಕಾರಿ ಬಾಗಲಕೋಟೆ (8660705052), ಬಾದಾಮಿ (9449564364), ಗುಳೇದಗುಡ್ಡ (9902599785), ಹುನಗುಂದ (94485 24895), ಇಳಕಲ್ಲ (97404123381), ಬೀಳಗಿ (9449940003), ಮು ಧೋಳ (9480263250), ಜಮ ಖಂಡಿ (94749168299), ರಬಕವಿ -ಬನಹಟ್ಟಿ (9448576183) ಸಂಪರ್ಕಿಸಬಹುದಾಗಿದೆ.

# ಕಲಿಕೆ ಶಿಕ್ಷಣ ಹಾಗೂಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ) ಲಿಂಗಸಗೂರು ವತಿಯಿಂದ ಜಾನುವಾರು ಗಳಿಗೆಮೇವು ದಾನ

**ವರದಿ ಶಾಮೀದ್‌ಅಲಿ ಕರಡಕಲ್.**

**ಲಿಂಗಗಸೂಗೂರು:** ತಾಲೂಕಿನ ಮುದಗಲ್. ಗ್ರಾಮದಲ್ಲಿ ದಿನಾಂಕ 26-12-2024 ರಂದು ಶ್ರೀ ಶರಣಮ್ಮ ಮಾತೆಯವರ ಗೋಶಾಲೆಗೆ ಕಲಿಕೆ ಶಿಕ್ಷಣ ಹಾಗೂ ಗ್ರಾಮೀಣ ಆಭಿವೃದ್ಧಿ ಸಂಸ್ಥೆ(ರಿ) ಲಿಂಗಸುಗೂರು ಇವರ ವತಿಯಿಂದ ಜಾನುವಾರಗಳಿಗೆ ಮೇವು ದಾನ ಮಾಡಲಾಯಿತು ಹಾಗೂ ಗೋಶಾಲೆಯಲ್ಲಿ ಪ್ರತಿನಿತ್ಯ ಗೋವುಗಳ ಆರೈಕೆ ಮಾಡುವಂತ ಕುಟುಂಬಕ್ಕೆ ಸನ್ಮಾನಿಸಿ ಗೌರವಿಸಲಾಯಿತು. ಪ್ರತಿಯೊಬ್ಬರ ಜೀವನದಲ್ಲಿ ಸಹಕಾರ ಸಹನೆ ಧಾನ ಮತ್ತು ಧರ್ಮವನ್ನೊಳಗೊಂಡು ಮನುಕುಲದಲ್ಲಿ ಮಾನವನ ಸ್ವಾರ್ಥಜೀವನದಲ್ಲಿ ಪ್ರಾಣಿ ಪಕ್ಷಿಗಳ ಬಗ್ಗೆ ಅತೀವಕಾಳಜಿಯಿಂದ ಪ್ರತಿಯೊಬ್ಬ ಜನಸಾಮಾನ್ಯರು ಕೂಡ ಜಾನುವಾರಗಳಪ್ರೀತಿಗೆಪಾತ್ರರಾಗಬೇಕೆಂದು ಎಂಬ ನಿಲುವಿನೊಂದಿಗೆ ನಾವು



ಸಂಪಾದಿಸುವ ಒಂದು ರೊಟ್ಟಿಯಲ್ಲಿ ಅರ್ದರೊಟ್ಟಿಯನ್ನಾದರೂ ಇನ್ನೊಬ್ಬರ ಬದುಕಿಗೆ ಆಸರೇಯಾಗುವಂತೆ ಅಥ-ವಾ ಮನುಕುಲವರಿತು ಪ್ರಾಣಿ ಪಕ್ಷಿಗಳ ಬಗ್ಗೆ ದಯೆನೀತಿಯನ್ನು ಪರಿಪಾಲನೆ ಮಾಡಬೇಕಾದುದು ಮಾನವ ಧರ್ಮದ ಅತಿ ಅಮೂಲ್ಯವಾದ ಗಳಿಗೆಯಾಗಿರುತ್ತದೆ ಇತ್ತೀಚಿನ ದಿನದಲ್ಲಿ ಅನೇಕ ಸಂಘ ಸಂಸ್ಥೆಗಳು ಪ್ರಾಣಿದಯೆ ಹಾಗೂ ಗೋಶಾಲೆಗಳನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಶಾಖೆಗಳು ಪ್ರಾರಂಭಿಸಿಜಾನುವಾರಗಳಕುರಿತುಇವುಗಳ ಆರೋಗ್ಯ ಮತ್ತು ಅಹಾರದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕಾಳಜಿ ವಹಿಸುವಂತಾಗಬೇಕು. ಇದೇ ಸಂದರ್ಭದಲ್ಲಿ ಕಲಿಕೆ ಶಿಕ್ಷಣ ಹಾಗೂ ಗ್ರಾಮೀಣ ಆಭಿವೃದ್ಧಿ ಸಂಸ್ಥೆ(ರಿ) ಲಿಂಗಸುಗೂರು ಇವರು ಸಮಾಜದಲ್ಲಿ ಒಂದಲ್ಲಾ ಒಂದು ವಿಶೇಷತೆ, ಸಮಾಜದ ಕುರಿತು ಕಾಳಜಿ, ಪ್ರಾಣಿ ಪಕ್ಷಿಗಳ ಬಗ್ಗೆ ಹೆಚ್ಚಿನ ಅಭಿರುಚಿಹೊಂದಿ ಮೇವುದಾನ ಮಾಡಿರುವುದು ಅತೀವ ಸಂತೋಷ ತಂದಿದೆ ಇದೇ ರೀತಿ ಇನ್ನು ಮುಂದೆಕೂಡ ಸಂಸ್ಥೆ ಹೆಚ್ಚಿನ ರೀತಿಯಲ್ಲಿ ಸಮಾಜದ ಏಳಿಗೆಯ ಕಾರ್ಯದಲ್ಲಿ ಪಾಲ್ಗೊಳ್ಳಲಿ ಎಂದು ಶ್ರೀ ಗುಂಡಪ್ಪ ಮುದಗಲ್ ಅವರು ಹರ್ಷಿಸಿದರು.

ಇದೇ ಸಂದರ್ಭದಲ್ಲಿ ಕಲಿಕೆಯ ಸಂಸ್ಥೆಯ ಅಧ್ಯಕ್ಷರಾದ ಆಕಾಶ್ ಡಿಜಿಟಲ್ ಮಾಲಿಕರು ಹನುಮೇಶ ಹೂಗಾರ ಹಾಗೂ ಸಂಘದ ಇತರೇ ಸದಸ್ಯರನ್ನೊಳಗೊಂಡು ಅಲ್ಪಮಟ್ಟಿನ ತಮ್ಮ ಅಳಿಲು ಸೇವೆಯನ್ನು ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ನಿತಿನ್ ಹೂಗಾರ , ಹುಲಿರಾಜ್, ವೆಂಕಟೇಶ ಮಾನಮಟ್ಟಿ, ಅನ್ನಪೂರ್ಣ ಗೌಡೂರ, ಇತರರು ಇದ್ದರು.

# ಗುಣಮಟ್ಟದ ಶಿಕ್ಷಣದಿಂದ ಮಕ್ಕಳ ಬದುಕು ಬಂಗಾರವಾಗುತ್ತದೆ: ಈರಪ್ಪ ದೇಯಣ್ಣವರ



**ಬೆಟಗೇರಿ :** ಕಲಿಕೆ ನಿಂತ ನೀರಾಗದೇ ಹರಿಯುವ ನೀರಿನಂತಿರಬೇಕು. ಶಾಲಾ ಶಿಕ್ಷಕರು ಮಕ್ಕಳಿಗೆ ನಿತ್ಯ ಹೊಸತನದ ಅನುಭವ ನೀಡಬೇಕು ಎಂದು ಬೆಟಗೇರಿ ತಾಪಂ ಮಾಜಿ ಸದಸ್ಯ ಈರಪ್ಪ ದೇಯಣ್ಣವರ ಹೇಳಿದರು.

ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಚೈತನ್ಯ ಗ್ರುಪ್ಸ್‌ನಬೆಟಗೇರಿಕೃಷ್ಣಶರ್ಮಚೈತನ್ಯಕನ್ನಡಮಾಧ್ಯಮ ಮತ್ತು ಶ್ರೀಮತಿ ಸತ್ತೆವ್ವದೇಯಣ್ಣವರ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ನಡೆದ ಉಭಯ ಮಾಧ್ಯಮ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಬಿಳ್ಕೊಡುವ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಮಾತನಾಡಿ, ಗುಣಮಟ್ಟದ ಶಿಕ್ಷಣದಿಂದ ಮಕ್ಕಳ ಬದುಕು ಬಂಗಾರವಾಗುತ್ತದೆ ಎಂದರು.

ಶಿಕ್ಷಣಪ್ರೇಮಿ ಬಸಪ್ಪ ಮೇಳೆಣ್ಣವರ ಜ್ಯೋತಿ ಬೆಳಗಿಸಿ ಸಮಾರಂಭ ಉದ್ಘಾಟಿಸಿದರು. ಉಭಯ ಮಾಧ್ಯಮ ಶಾಲೆಗಳ ಆಡಳಿತಾಧಿಕಾರಿ ರವಿ ಭರಮನಾಯ್ಕ ಅಧ್ಯಕ್ಷತೆ ವಹಿಸಿ ಮಾತನಾಡಿ, ಸನ್ 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಸ್ಥೆಯ 5ನೇ ತರಗತಿ ಬಡ ಮತ್ತು ಪ್ರತಿಭಾವಂತ 25 ಜನ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆ ಹಾಕಿಕೊಳ್ಳಲಾಗಿದೆ ಎಂದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ವೈ.ಬಿ.ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಕರ, ಪಾಲಕರ ಹಾಗೂ ಬಾಲಕರ ಜವಾಬ್ದಾರಿಗಳ ಕುರಿತು ಹೇಳಿದರು. ವಿವಿಧ ವಲಯದಲ್ಲಿ ಸಾಧನೆಗೈದ ಮತ್ತು ಉನ್ನತ ವಿಶೇಷ ವ್ಯಾಸಂಗಕ್ಕೆ ಆಯ್ಕೆಯಾದ ಉಭಯ ಶಾಲೆಯ ವಿದ್ಯಾರ್ಥಿಗಳಿಗೆ, ಗಣ್ಯರನ್ನು ಸತ್ಕರಿಸಿದ ಬಳಿಕ ಉಭಯ ಮಾಧ್ಯಮ ಶಾಲಾ ಮಕ್ಕಳಿಂದ ಭಾಷಣ, ರೂಪಕಗಳ ವೇಷಭೂಷಣ ಹಾಗೂ ಸಾಂಸ್ಕೃತೀಕ ಮನರಂಜನೆಯ ಕಾರ್ಯಕ್ರಮಗಳು ನಡೆದು ಬಹುಮಾನ ವಿತರಿಸಲಾಯಿತು.

ನಿವೃತ್ತ ಮುಖ್ಯಶಿಕ್ಷಕ ಎಸ್.ವೈ.ಪಾಟೀಲ, ರಮೇಶ ನಾಯ್ಕ, ಶೇಖರ ಪಾಟೀಲ, ಕನ್ನಡ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕಿ ಕಮಲಾಕ್ಷಿ ನಾಯ್ಕ, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕಿ ವಿದ್ಯಾಶ್ರೀ ಜನ್ಮಟ್ಟಿ, ನಬೀಸಾಬ ನದಾಫ್, ಷರಿಪ್ಸಾಬ ನದಾಫ್, ಉಭಯ ಮಾಧ್ಯಮ ಶಾಲೆಗಳ ಶಿಕ್ಷಕರು, ಪಾಲಕರು, ಶಿಕ್ಷಣ ಪ್ರೇಮಿಗಳು, ವಿದ್ಯಾರ್ಥಿಗಳು, ಇತರರು ಇದ್ದರು. ಕಾವೇರಿ ಹೊಸಮಠ ಪ್ರಾರ್ಥಿಸಿದರು. ಪಾರ್ವತಿ ಮುಧೋಳ ಸ್ವಾಗತಿಸಿದರು. ನಭೀಸಾಬ ನದಾಫ್ ಕಾರ್ಯಕ್ರಮ ನಿರೂಪಿಸಿದರು. ವೀಣಾ ಆಗೇರ ಕೊನೆಗೆ ವಂದಿಸಿದರು.

# ಜಾತಿ ರಾಜಕಾರಣ ಮಾಡಿ ಸಮಾಜ ಹಾಳು ಮಾಡುತ್ತಿದ್ದಾರೆ: ಬೆನ್ನಾಳಿ ಮಹಾರಾಜರು

**ಹಳ್ಳೂರ:** ಸಂಸಾರುಜಂಜಾಟದಲ್ಲಿದ್ದುಕೊಂಡು ದೇವರ ನಾಮಸ್ಮರಣೆ ಮಾಡುತ್ತಾಯಿದ್ದರೆ ಬಂದ ಕಷ್ಟ ಬಯಲಾಗಿ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆತು ಜೀವನವು ಸಾಥ-ರ್ಕತೆಯನ್ನು ಪಡೆಯುತ್ತದೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು. ಅವರು ಗ್ರಾಮದ ಗಿರಿಮಲ್ಲೇಶ್ವರ ಮಹಾರಾಜರ ಆಶ್ರಮದಲ್ಲಿ ನೆಡೆದ ಗಿರಿಮಲ್ಲೇಶ್ವರ ಮಹಾರಾಜರ ಮತ್ತು ಶ್ರೀ ಮಾಧವಾನಂದ ಪ್ರಭು-ಜಿಯವರ ಸ್ಮರಣಾರ್ಥ ಆದ್ಯಾತ್ಮ ಸಪ್ತಾಹ ಕಾರ್ಯಕ್ರಮದಅಧ್ಯಕ್ಷತೆವಹಿಸಿಮಾತನಾಡಿ ಶ್ರೇಷ್ಠವಾದ ಇಂಚಗೇರಿ ಸಂಪ್ರದಾಯದ ಪರಮ ಭಕ್ತನಾಗಿದ್ದಕ್ಕೆ ನಾನು ರಾಜ-ಕೀಯವಾಗಿ ಉನ್ನತಮಟ್ಟಕ್ಕೆ ಬೆಳೆದಿದ್ದೇನೆ ನೀವು ಕೂಡಾ ದೇವರನ್ನು ನಂಬಿ ನಡೆದರೆ ಯಾವುದಕ್ಕೂ ಕೊರತೆಯಿಲ್ಲ ಒಬ್ಬ ವ್ಯಕ್ತಿ ಮುಂದುವರೆಯ ಬೇಕಾದರೆ ಗುರುವಿನ ಆಶೀರ್ವಾದವಿದ್ದರೆ ಮಾತ್ರ ಸಾದ್ಯ ಎಂದು ಹೇಳಿದರು.

ಬೆನ್ನಾಳೆ ಪ್ರಭುಜಿ ಮಹಾರಾಜರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ



ಮಾತನಾಡಿ ಕೆಲವು ರಾಜಕಾರಣಿಗಳು ಅಧಿಕಾರದ ಆಸೆಗಾಗಿ ಜಾತಿ ಎಂಬ ವಿಷ ಬೀಜ ಬಿತ್ತಿ ಜನರಲ್ಲಿರುವ ಪ್ರೀತಿ, ಸಂಬಂಧವನ್ನು ಕೆಡಿಸುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಇನ್ನೋಬರ ಮನಸ್ಸನ್ನು ನೋಯಿಸಿ ಕೆಟ್ಟ ಕರ್ಮಾದಿಗಳನ್ನು ಮಾಡಿ ಪಾಪಕ್ಕೆ ಗುರಿಯಾಗದೆ ಸತ್ಕಾರ್ಯಗಳನ್ನು ಮಾಡಿ ಪುಣ್ಯ ಪಡೆದುಕೊಳ್ಳಿರಿ. ದಿನಾಲೂ ಕೋಳಿ ಕೂಗುವ ಮುನ್ನ ಎದ್ದು ಕಾಯಕದ ಜೊತೆಗೆ ದೇವರ ನಾಮಸ್ಮರಣೆ ಮಾಡುತ್ತಾ ಇದ್ದರೆ ಮಾಡುವ ಕೆಲಸ ಕಾರ್ಯ ಸರಳ ನಡೆದು ಸಕಲ ಸೌಭಾಗ್ಯ ದೊರೆಯುತ್ತವೆ. ಧ್ಯಾನದಲ್ಲಿ ಅಗಾಧವಾದ ಶಕ್ತಿ ಅಡಗಿದೆ. ಇಂಚಗೇರಿ ಸಂಪ್ರದಾಯದಲ್ಲಿ ಜಾತಿ ಭೇದವಿಲ್ಲ ಎಲ್ಲರೂ ಪ್ರೀತಿ ವಿಶ್ವಾಸದಿಂದ ಜೀವನ ಸಾಗಿಸಿರಿ. ಅಧಿಕಾರ ಅಂತಸ್ತು ಯಾವುದೂ ಸ್ಥಿರವಲ್ಲ. ಜೀವನದಲ್ಲಿ ಅವಮಾನ ಅಪಮಾನವಾದರು ಕೊನೆಗೆ ಸನ್ಮಾನದ ಭಾಗ್ಯ ದೊರೆಯುತ್ತದೆ ತಾಳ್ಮೆ ಬೇಕು.ಪ್ರತಿಯೊಬ್ಬರಲ್ಲಿ ದೇಶಾಭಿಮಾನವಿರಬೇಕೆಂದು ಹೇಳಿದರು.

ಮಹಾದೇವ ಮಹಾರಾಜರು ಸಾನಿಧ್ಯ ವಹಿಸಿ ಮಾತನಾಡಿ ಯುವ ಜನತೆ ಟಿ ವಿ ಮೊಬೈಲ ಮೊರೆ ಹೋಗಿ ಚಿಕ್ಕ ವಯಸ್ಸಿನಲ್ಲಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿತು ಮಹಾತ್ಮರ ಮಾತುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಹೋಗಬೇಕೆಂದು ಹೇಳಿದರು.

ಶ್ರೀಮಂತ ಮಹಾರಾಜರು. ವಿಜಯ ಮಹಾರಾಜರು. ಅರವಿಂದ ವಕೀಲರು. ಮಾತೋಶ್ರೀ ನುರುಜಾನ ಬಾಯಿ. ಹಿಡಕಲ್ ಮಹಾರಾಜರು ಪ್ರವಚನ ಹೇಳಿದರು.

ಬಾಳಯ್ಯ ಹೀರೆಮಠ. ಲಕ್ಷ್ಮಣ ಹೊಸಮನಿ. ಗಿರಮಲ್ಲ ಸಂತಿ. ಲಕ್ಷ್ಮಣ ಕುಲಿಗೋಡ. ಅಲ್ಲಪ್ಪ ಕೌಜಲಗಿ ಬಸವರಾಜ ಕೌಜಲಗಿ. ರಮೇಶ ಬಿರಾದರ.

ಸಂಗಪ್ಪ ದುರದುಂಡಿ.ದುಂಡಪ್ಪ ಕತ್ತಿ. ಬಾಬುಲ ಮುಜಾವರ. ಗೀರಮಲ್ಲ ಕೌಜಲಗಿ.ಶಿವಾನಂದ ಹೊಸಮನಿ. ಕೆಂಪಣ್ಣ ರುದ್ರಾಪುರ ಸೇರಿದಂತೆ ಅನೇಕರಿದ್ದರು.

ಕಾರ್ಯಕ್ರಮವನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮುರಿಗೆಪ್ಪ ಮಾಲಗಾರ ಸ್ವಾಗತಿಸಿ ,ನಿರೂಪಿಸಿದರು.

# ಬೆಳಗಾವಿ: ತ್ಯಾಜ್ಯ ಗ್ರಾಹಕರ ಗಮನಕ್ಕೆ

**ಬೆಳಗಾವಿ :** ಗ್ರಾಹಕರ ವ್ಯಾಜ್ಯಗಳ ಕಾಯ್ದೆಯಡಿಯಲ್ಲಿ 2006 ರಿಂದ 2010 ರವರೆಗಿನ ಅವಧಿಯಲ್ಲಿ ದಾಖಲಾಗಿ ಇತ್ಯರ್ಥವಾದ ಎಲ್ಲ ಪ್ರಕರಣಗಳಲ್ಲಿ ಉಲ್ಲೇಖಿತ ಸುತ್ತೋಲೆಯ ನಿರ್ದೇಶದನ್ವಯ ಪ್ರಕರಣಗಳನ್ನು ಸಂಪೂರ್ಣ ನಾಶಗೊಳಿಸುತ್ತಿರುವ ಪ್ರಯುಕ್ತ ವಕೀಲರು, ದೂರುದಾರರು, ಎದುರುದಾರರು ಹಾಜರುಪಡಿಸಿರುವ ಮೂಲ ದಾಖಲೆಗಳು ಹಾಗೂ ಇನ್ನಿತರ ದಾಖಲೆಗಳನ್ನು ಪಡೆದುಕೊಳ್ಳಲು ದಿನಾಂಕ:13.01.2025 ರೊಳಗಾಗಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಕಚೇರಿಗೆ ಖುದ್ದಾಗಿ ಬಂದು ತಮಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಹಾಜರಪಡಿಸುವ ಮೂಲ ದಾಖಲೆಗಳನ್ನು ನಿಯಮನುಸಾರ ದಾಖಲಿಸಬೇಕು.

ಒಂದು ವೇಳೆ ನಿಗದಿಪಡಿಸಿದ ಅವಧಿಯೊಳಗೆ ತಾವು ಹಾಜರುಪಡಿಸಿದ ಮೂಲ ದಾಖಲೆಗಳನ್ನು ಹಾಗೂ ಇನ್ನೀತರ ದಾಖಲೆಗಳನ್ನು ಪಡೆದುಕೊಳ್ಳದೆ ಇದ್ದ ಪಕ್ಷದಲ್ಲಿ ಮೇಲ್ಕಾಣಿಸಿದ ಉಲ್ಲೇಖಿತ ಸುತ್ತೋಲೆಯ ಅನುಸಾರ ಎಲ್ಲಾ ದಾಖಲೆಗಳನ್ನು ಸಂಪೂರ್ಣ ನಾಶಪಡಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಬೆಳಗಾವಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಜನತೆ ಕೃಷಿಯತ್ತ ಒಲವು ತೋರಲಿ: ಡಾ. ಮಧುಸೂದನ



**ವಿಜಯಪುರ :** ರೈತ ಈ ದೇಶದ ಬೆನ್ನೆಲುಬು. ಕೃಷಿ ಪ್ರಧಾನವಾದ ನಮ್ಮ ದೇಶದ ರೈತರ ಮಕ್ಕಳು ನೌಕರಿಗಾಗಿ ಕೃಷಿಯಿಂದ ದೂರ ಸರಿಯುತ್ತಿರುವುದು ಕಳವಳಕಾರಿ ಅಂಶವಾಗಿದೆ ಎಂದು ಹೈದರಾಬಾದ ಅಖಿಲ ಭಾರತ ಜೋಳ ಸಂಶೋಧನಾ ಕೇಂದ್ರದ ಯೋಜನಾ ನಿರ್ದೇಶಕ ಡಾ. ಮಧುಸೂದನ ಆರ್. ಹೇಳಿದರು.

ನಿಡಗುಂದಿ ತಾಲೂಕಿನ ಉಣ್ಣಿಭಾವಿ ಗ್ರಾಮದಲ್ಲಿ ಸೋಮವಾರ ವಿಜಯಪುರ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ಅಖಿಲ ಭಾರತ ಜೋಳ ಅಬಿವೃದ್ಧಿ ಯೋಜನೆ, ನಿಡಗುಂದಿ ಶ್ರೀ ಹಾದಿಬಸವಣ್ಣಪ್ಪ ಆಯಿಲ್ ಸಿಡ್ಸ್ ಹಾಗೂ ಮಿಲೇಟ್ಸ್ ಪ್ರೋಡ್ಯೂಡರ್ ಕಂಪನಿ ವತಿಯಿಂದ ವಿಜಯಪುರ ಜಿಲ್ಲೆಯ ಪ್ರದೇಶಗಳಲ್ಲಿ ಸಿರಿಧಾನ್ಯ ತಂತ್ರಜ್ಞಾನಗಳ ಪ್ರಚಾರ ಹಾಗೂ ಅಳವಡಿಕೆ ತರಬೇತಿ ಕಾರ್ಯಕ್ರಮಕ್ಕೆ ಸಸಿಗೆ ನೀರರೇಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ರೈತರು ಈ ಭಾಗದ ಪ್ರಮುಖ ಬೆಳೆ ಜೋಳವನ್ನು ನಿರ್ಲಕ್ಷಸುತ್ತಿದ್ದು, ಜನರು ಅಪೌಷ್ಠಿಕತೆ ಮುಂತಾದ ಅರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಜೋಳ ತಿಂದವನು ತೋಳದಂತಾಗುತ್ತಾನೆಂಬ ಗಾದೆಯಿದೆ. ಅದಕ್ಕಾಗಿ ಜೋಳ ಹಾಗೂ ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯಬೇಕೆಂದರು.

ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ ಮಾತನಾಡಿ, ಇಂದು ಮಾಜಿ ಪ್ರಧಾನಿ ಚೌಧರಿ ಚರಣಸಿಂಗ ಇವರ ಜನ್ಮ ದಿನವನ್ನು ರಾಷ್ಟ್ರೀಯ ರೈತ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. ಈ ಸಲದ ಘೋಷ್ಯವಾಕ್ಯ ಸುಸ್ಥಿರ ಕೃಷಿ ಪುನಶ್ಚೇತನಕ್ಕಾಗಿ ಡಿಜಿಟಲ್ ತಂತ್ರಜ್ಞಾನ ಅಳವಡಿಕೆ ಎಂಬುದಾಗಿದೆ. ಡಾ. ಚೌಧರಿ ಚರಣಸಿಂಗ್ ಅವರು ರೈತರ ಸಮಗ್ರ ಏಳ್ಗೆಗಾಗಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳನ್ನು, ಅನೇಕ ಕಾಯ್ದೆಗಳನ್ನು ಜಾರಿಗೆ ತಂದಿದ್ದಾರೆ. ಇದರಿಂದಾಗಿ ರೈತರು ಸಾವಲಂಬಿ ಬದುಕು ಸಾಗಿಸಲು ಅನುಕೂಲವಾಗಬೇಕು ಎಂಬ ಮಹಾದಾಸೆ ಅವರಲ್ಲಿತ್ತು. ದೇಶಕ್ಕೆ ಅನ್ನ ನೀಡುವ ರೈತರನ್ನು, ಕೃಷಿಯಲ್ಲಿ ಸಾಧನೆ ಮಾಡಿದ ರೈತರನ್ನು ನೆನೆಯುವ ಸಲುವಾಗಿ ಈ ದಿನವನ್ನು ರಾಷ್ಟ್ರೀಯ ರೈತರ ದಿನವನ್ನಾಗಿ ಅಚರಿಸಲಾಗುತ್ತಿದೆ ಎಂದರು.

ಸಹ ಸಂಶೋಧನಾ ನಿರ್ದೇಶಕ ಡಾ. ಎಸ್. ಬಿ. ಜಗ್ಗಿನವರ ಮಾತನಾಡಿ, ರೈತರು ಸಂಘಟಿತರಾಗಬೇಕು, ಕೃಷಿಯನ್ನು ನಂಬಿ ಶ್ರಮವಹಿಸಿ ದುಡಿಯಬೇಕು. ವೈಜ್ಞಾನಿಕ ಕೃಷಿ ಅಳವಡಿಸಿಕೊಳ್ಳಬೇಕು. ಅಗಲೇ ಅವರ ಬದುಕು ಹಸನಾಗುತ್ತದೆ. ಬೆಳೆಗಳಲ್ಲಿ ನೂತನ ತಳಿಗಳನ್ನು ಆಯ್ಕೆಮಾಡಿ ಅಧಿಕ ಇಳುವರಿ ಪಡೆಯಲು ಸಲಹೆ ನೀಡಿದರು.

ಡಾ. ಎಸ್. ಎಸ್. ಕರಭಂಟನಾಳ ಪ್ರಾಸ್ತಾವಿಕವಾಗಿ ಮಾತನಾಡಿ, ಜೋಳದಲ್ಲಿ ಹತ್ತು ಹಲವು ತಳಿಗಳಿವೆ. ಪಶುಸಾಕಣಿಕೆಗೆ ಸಾಕಷ್ಟು ಉತ್ತಮ ಮೇವು ಕೊಡುವ ತಳಿಗಳಿವೆ. ಅದಕ್ಕಾಗಿ ಜೋಳ ಮತ್ತು ಸಿರಿಧಾನ್ಯ ಬೆಳೆಗಳಿಗೆ ತಮ್ಮ ಯೋಜನೆಯಿಂದ ರೈತರಿಗಾಗಿ ಹಲವಾರು ಸವಲತ್ತುಗಳನ್ನು ನೀಡಲಾಗುತ್ತಿದೆ. ಎಂದರು.

ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಸೀತನಿ ಜೋಳ ಕುರಿತು ಹಸ್ತ ಪತ್ರಿಕೆ ಬಿಡುಗಡೆಗೊಳಿಸಲಾಯಿತು. ಆಯ್ದ ಫಲಾನುಭವಿ ರೈತರಿಗೆ ಯೋಜನೆಯಡಿಯಲ್ಲಿ ಕೀಟನಾಶಕ ಸಿಂಪರಣೆ ಸಾಧನ ಮತ್ತು ತಾಡಪತ್ರಗಳನ್ನು ಇದೇ ಸಂದರ್ಭದಲ್ಲಿ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೀರಲದಿನ್ನಿ ಗ್ರಾಮ ಪಂಚಾಯತ ಅಧ್ಯಕ್ಷ ರಮಜಾಬಾನು ಎಚ್. ಪಟೇಲ ವಹಿಸಿದ್ದರು. ವಿಜ್ಞಾನಿಗಳಾದ ಡಾ. ಚಂದ್ರಕಾಂತ ಸೋರೆಗಾವಿ, ಡಾ. ಅಶ್ವತ್ಥಾಮ ಎ. ಹೆಚ್., ಬಾಲಕೃಷ್ಣ ಗೌಡರ, ಅಶೋಕ ಕೊನರಡ್ಡಿ, ಬಸವರಾಜ ಎಸ್. ಕೊನರಡ್ಡಿ ವೇದಿಕೆಯಲ್ಲಿದ್ದರು.

ಅತಿಥಿಗಳಾಗಿ ಸಂಗನಗೌಡ ಕೊನರಡ್ಡಿ, ಭೀಮನಗೌಡ ಕೊನರಡ್ಡಿ, ಶೇಖರ ಗೂಗಿಹಾಳ, ವೀರಣ್ಣ ಮನಗೊಂಡ, ಮಲ್ಲನಗೌಡ ನಾಡಗೌಡ, ಸತೀಶ ನರಸರಡ್ಡಿ, ಅಶೋಕ ಕೊನರಡ್ಡಿ, ಚನ್ನಪ್ಪ ಕಂಬಳಿ, ಶಂಕ್ರೆಪ್ಪ ಹೂಗಾರ, ಸಾಹೇಬಗೌಡ ಪಾಟೀಲ, ಮಹಾದೇವಪ್ಪ ಕೊನರಡ್ಡಿ, ತಿಮ್ಮನಗೌಡ ಪಾಟೀಲ, ಮಂಜುನಾಥ ಸವನೂರ, ರಾಧಾ ಚಲವಾದಿ, ಶ್ರೀಶೈಲ ಕೊನರಡ್ಡಿ, ವನಕೇರಪ್ಪಗೌಡ ನರಸರಡ್ಡಿ ಸೇರಿದಂತೆ ಉಣ್ಣಿಬಾವಿ, ಹಂಗರಗಿ, ವಂದಾಲ, ಹುಣಶ್ಯಾಳ ಪಿ.ಸಿ., ಬೀರಲದಿನ್ನಿ ಗ್ರಾಮಗಳ ರೈತರು ಉಪಸ್ಥಿತರಿದ್ದರು.

# ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಎಲ್ಲ ಶರಣರ ಕ್ಷೇತ್ರಗಳನ್ನು ಸೇರ್ಪಡೆ ಮಾಡಲು ಆಗ್ರಹ

**ವಿಜಯಪುರ :** ಕೂಡಲಸಂಗಮ ಅಭಿವೃದ್ಧಿ ಮಂಡಳಿ ಅಡಿ ಇದ್ದ ಬಸವನ ಬಾಗೇವಾಡಿಯನ್ನು ಬೇರ್ಪಡಿಸಿ ಪ್ರತ್ಯೇಕ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ಅನುಷ್ಟಾನಕ್ಕೆ ತಂದಿದೆ. ಇದರ ಅಡಿಯಲ್ಲಿ ಉಳಿದ ಶರಣರ ಕ್ಷೇತ್ರಗಳನ್ನು ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಸೇರ್ಪಡೆ ಮಾಡಿ ಶರಣರ ಜೀವನ ಚರಿತ್ರೆ ಹಾಗೂ ಶರಣರ ಕುರುಹುಗಳನ್ನು ಉಳಿಸಲು ಸ್ಮಾರಕಗಳನ್ನು ನಿರ್ಮಿಸುವುದರೊಂದಿಗೆ ಸಂಪೂರ್ಣ ಅಭಿವೃದ್ಧಿ ಪಡಿಸಬೇಕೆಂದು ಇಂಗಳೇಶ್ವರ ಗ್ರಾಮದ ವಿಶ್ವ ಗುರು ಬಸವ ಮಾತಾ ಮಾದಲಾಂಬಿಕೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹಾಗೂ ರೈತ ಮುಖಂಡ ಅರವಿಂದ ಕುಲಕರ್ಣಿ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಸೋಮವಾರ ನಗರದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಬಸವನ ಬಾಗೇವಾಡಿ ನೂತನ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಬಸವ ಜನ್ಮಸ್ಥಳ ಇಂಗಳೇಶ್ವರ, ಹೋರಿಮಟ್ಟಿ ಗುಡ್ಡ, ಹಡಪದ ಅಪ್ಪಣ್ಣ ಜನಿಸಿದ ಮಸಬಿನಾಳ, ಲಿಂಗಮ್ಮಳ ಜನ್ಮಸ್ಥಳ ದೇಗಿನಾಳ, ಮಡಿವಾಳ ಮಾಚಿದೇವರ ಜನ್ಮಸ್ಥಳ ದೇವರ ಹಿಪ್ಪರಗಿ, ನುಲಿಯ




ಚಂದಯ್ಯನವರ ಜನ್ಮಸ್ಥಳ ಶಿವಣಗಿ, ನೀಲಮ್ಮಳ ಐಕ್ಯಸ್ಥಳ ತಂಗಡಗಿ ಇವುಗಳನ್ನು ಮಾತ್ರ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇರ್ಪಡೆಗೊಳಿಸಲಾಗಿದೆ. ಆದರೆ ಇನ್ನೂ ಜಿಲ್ಲೆಯಲ್ಲಿ ಹಲವಾರು ಶರಣರು ಜನಿಸಿದ ಕ್ಷೇತ್ರಗಳಿದ್ದು ಇವುಗಳನ್ನು ಸರ್ಕಾರದ ಗಣನೆಗೆ ತೆಗೆದುಕೊಂಡಿಲ್ಲ. ಮುದ್ದೇಬಿಹಾಳ ತಾಲೂಕಿನ ಬಾವೂರ ಬೊಮ್ಮಯ್ಯನ ಜನ್ಮಸ್ಥಳ, ಸಿಂದಗಿ ತಾಲೂಕಿನ ಚಿಮ್ಮಲಗಿ ಚಂದಿಮರಸರು, ನಾಗರಹಳ್ಳಿಯ ಗೊಲ್ಲಾಳೇಶ್ವರ ದೇವಸ್ಥಾನ, ಲಕ್ಕಮ್ಮಳ ಬೈರವಾಡಗಿ, ಅಗ್ರಹಾರಗಳಾದ ಮುತ್ತಗಿ, ಮನಗೂಳಿ ಸೇರಿದಂತೆ ವಿಜಯಪುರ ಜಿಲ್ಲೆಯಲ್ಲಿ ಇನ್ನುಳಿದ ಶರಣರ ಕ್ಷೇತ್ರಗಳನ್ನು ಗುರುತಿಸಿ ಅವುಗಳನ್ನು ಕೂಡ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇರ್ಪಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಬಸವಣ್ಣನವರು ಜನಿಸಿದ ಇಂಗಳೇಶ್ವರ ಗ್ರಾಮದಲ್ಲಿ ಬಸ್ ನಿಲ್ದಾಣದ ಆವರಣದಲ್ಲಿ ಶೀಘ್ರದಲ್ಲಿ ಪಂಚಲೋಹದ ಅಶ್ವಾರೂಡ ಬಸವೇಶ್ವರ ಮತ್ಥಳಿ ನೀರ್ಮಿಸುವುದು, 12 ನೇ ಶತಮಾನದಲ್ಲಿ ಬಸವಣ್ಣನವರ ಜೀವನ ಚರಿತ್ರೆಗೆ ಸಂಬಂಧಿಸಿದ ಹಾಲಬಾವಿಯಿಂದ ಬಸ್ ನಿಲ್ದಾಣದ ಮಾರ್ಗವಾಗಿ ಬಸವಣ್ಣನವರು ಜನಿಸಿದ ಮಾದಲಾಂಬಿಕೆ ತವರು ಮನೆ ಸ್ಮಾರಕದ ವರೆಗೆ ರಸ್ತೆ ಅಗಲೀಕರಣ ಮಾಡಿ ಮಧ್ಯೆದಲ್ಲಿ ವಿಭಜಕ ನಿರ್ಮಿಸಿ ವಿದ್ಯುತ ದ್ವೀಪಗಳನ್ನು ಅಳವಡಿಸಬೇಕು ಎಂದರು. ಅಂತರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ ಸ್ಥಾಪಿಸುವದು, ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಿಸುವದು, ಬಸ್ ನಿಲ್ದಾಣ ಮಂಜೂರು ಮಾಡಿಸುವದು, ಕ್ರೀಡಾಂಗಣ ನಿರ್ಮಿಸುವುದು, ಬಸವಣ್ಣನವರು ಈಜಾಡಿದ ಬಸವನ ಬಾವಿಯನ್ನು ಅಭಿವೃದ್ಧಿಪಡಿಸುವದು, ಗ್ರಾಮದಲ್ಲಿಯ ಚಾಲುಕ್ಯರ ಕಾಲದ ಶ್ರೀಮನ್ ನಾರಾಯಣ ದೇವಸ್ಥಾನ ಜೀರ್ಣೋದ್ದಾರ ಮಾಡುವದು, ರೇವಣಸಿದ್ದೇಶ್ವರ ಬೆಟ್ಟದ ಮೇಲೆ ಎಲ್ಲ ಶರಣರ ಮೂರ್ತಿಗಳನ್ನು ಸ್ಥಾಪಿಸುವದು ಹಾಗೂ ಸುಂದರ ಉದ್ಯಾನವನ ನಿರ್ಮಾಣ ಮಾಡುವದು ಸೇರಿದಂತೆ ಇಂಗಳೇಶ್ವರ ಗ್ರಾಮವನ್ನು ಸಂಪೂರ್ಣ ಅಭಿವೃದ್ಧಿಗೊಳಿಸಿ ಅಂತರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿಸಬೇಕೆಂದು ಅರವಿಂದ ಕುಲಕರ್ಣಿ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಟಿಯಲ್ಲಿ ದತ್ತಾತ್ರೇಯ ಕುಲಕರ್ಣಿ, ಭೀಮರಾಯ ತಾಳಿಕೋಟಿ, ಸಾಯಿನಾಥ ಪಾಟೀಲ ಇದ್ದರು.

# ಜ. 4 ಮತ್ತು 5 ರಂದು ರಾಜ್ಯ ಮಟ್ಟದ ಯುವಜನೋತ್ಸವ ದಾವಣಗೆರೆಯಲ್ಲಿ ಆಯೋಜನೆ

**ಕೊಪ್ಪಳ :** 2024-25ನೇ ಸಾಲಿನ ರಾಜ್ಯ ಮಟ್ಟದ ಯುವ ಜನೋತ್ಸವ ಕಾರ್ಯಕ್ರಮವನ್ನು 2025ರ ಜನವರಿ 04 ಮತ್ತು 05 ರಂದು ದಾವಣಗೆರೆ ಜಿಲ್ಲೆಯಲ್ಲಿ ಸಂಘಟಿಸಲು ತೀರ್ಮಾನಿಸಲಾಗಿದೆ.

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನ ಪಡೆದ ಸ್ಪರ್ಧಿಗಳು ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಬಹುದು. ಸ್ಪರ್ಧಿಗಳು ಜನವರಿ 04 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯೊಳಗಾಗಿ ಹೆಸರು ನೋಂದಾಯಿಸಿಕೊಳ್ಳಬೇಕು. ನಂತರ ಬಂದವರನ್ನು ನೋಂದಾಯಿಸಿಕೊಳ್ಳಲಾಗುವುದಿಲ್ಲ. ನೋಂದಣಿಗೆ ವಯೋಧೃಡೀಕರಣ ಪತ್ರ (ಮೂಲ ಆಧಾರ ಕಾರ್ಡ/ಎಸ್.ಎಸ್.ಎಲ್.ಸಿ ಅಂಕಪಟ್ಟಿ) ಕಡ್ಡಾಯವಾಗಿರುತ್ತದೆ. ಕೊಪ್ಪಳ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ನಡೆದ ಜನಪದ ನೃತ್ಯ(ವೈಯಕ್ತಿಕ), ಜನಪದ ಗೀತೆ(ವೈಯಕ್ತಿಕ) ಸ್ಪರ್ಧೆಗಳನ್ನು ಕೇಂದ್ರ ಸರ್ಕಾರದ ಆದೇಶದನ್ವಯ ರಾಜ್ಯ ಮಟ್ಟದಲ್ಲಿ ಕೈಬಿಡಲಾಗಿದೆ.

ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಸ್ಪರ್ಧಿಗಳು ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸುವಂತಿಲ್ಲ. ಸ್ಪರ್ಧಿಗಳಿಗೆ 02 ದಿನಗಳ ಸಾಮಾನ್ಯ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸ್ಪರ್ಧಿಗಳು ಕಡ್ಡಾಯವಾಗಿ ಲಘು ಹಾಸಿಗೆ, ಹೊದಿಕೆ ಮತ್ತು ಬೀಗಗಳನ್ನು ತರಬೇಕು. ಭಾಗವಹಿಸುವ ಸ್ಪರ್ಧಾಳುಗಳಿಗೆ 02 ದಿನಗಳ ಊಟೋಪಹಾರ ವ್ಯವಸ್ಥೆಯನ್ನು ಸಂಘಟಕರು ಕಲ್ಪಿಸಿದ್ದು, ನೊಂದಣಿಯಲ್ಲಿ ಕೂಪನ್ ಪಡೆದು ಸಂಘಟಕರಿಗೆ ಸಹಕರಿಸಬೇಕು. ರಾಜ್ಯ ಮಟ್ಟದ ಯುವಜನೋತ್ಸವ ಸ್ಪರ್ಧೆಗಳಲ್ಲಿ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ಗಲಭೆ, ಗೊಂದಲಗಳಿಗೆ ಅವಕಾಶ ಕಲ್ಪಿಸಬಾರದು. ಅಂತಹ ತಂಡಗಳನ್ನು ಕಾರ್ಯಕ್ರಮದಿಂದ ಹೊರಗಿಡಲಾಗುವುದು. ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಸ್ಪರ್ಧಾಳುಗಳು ರಾಷ್ಟ್ರ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಯಾವುದೇ ತಂಡ / ಸ್ಪರ್ಧಿ ಸ್ಪರ್ಧೆ ಆಯೋಜನೆ ಸ್ಥಳದಲ್ಲಿ ಸಮಯಕ್ಕೆ ಸರಿಯಾಗಿ ತಯಾರಿರಬೇಕು. ಇಲ್ಲದಿದ್ದರೆ ತಂಡ/ಸ್ಪರ್ಧಿಯನ್ನು ಗೈರು ಹಾಜರೆಂದು ಪರಿಗಣಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ತುಕರಾಂ ರಂಜಪಲ್ಲಿ ದೂ.ಸಂ 8197398600, ಶಿವರತನ್ ದಾವಣಗೆರೆ ದೂ. ಸಂ. 9380321534 ಗೆ ಹಾಗೂ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಗದಗ ರಸ್ತೆ, ಕೊಪ್ಪಳ ದೂರವಾಣಿ ಸಂ: 08539-230121ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆಯರ ಅಭಿವೃದ್ಧಿಗೆ ಒಕ್ಕೂಟದ ಅಧ್ಯಕ್ಷರ ಪಾತ್ರ ಮುಖ್ಯ




**ಮುಧೋಳ :** ಮಹಿಳೆಯರ ಅಭಿವೃದ್ಧಿಗೆ ಒಕ್ಕೂಟದ ಅಧ್ಯಕ್ಷರ ಪಾತ್ರ ಅಮೂಲ್ಯವೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರ ಯೋಜನೆಗಳನ್ನು ಸದುಪಯೋಗ ಪಡೆದುಕೊಂಡು ಹೊಸ ಮಹಿಳಾ ಉದ್ಯಮಿಗಳಾಗಬೇಕೆಂದು ತಿಳಿಸಿ ನಗರದ ಜಿಲ್ಲಾ ಸಂಪನ್ಮೂಲ ಕೇಂದ್ರದಲ್ಲಿ ನಡೆದ ಜಿಲ್ಲೆಯ ಸಂಜೀವಿನಿ ಮಹಿಳಾ ಗ್ರಾಮ ಪಂಚಾಯಿತಿ ಮಟ್ಟದ ಅಧ್ಯಕ್ಷರ ಸಾಮರ್ಥ್ಯ ಬಲವರ್ಧನೆ ತರಬೇತಿ ಕಾರ್ಯಗಾರವನ್ನು ಜಿಲ್ಲಾ ಪಂಚಾಯತ ಯೋಜನ ನಿರ್ದೇಶಕರಾದ ಪುನೀತ ರವರು ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ ಹಾಗು ಆರ್ಥಿಕ ಅಭಿವೃದ್ಧಿಯಾಗಲು ಆದಾಯ ತರುವಂತಹ ಕೈಗಾರಿಕಾ ಕೃಷಿ ಹಾಗು ಕೃಷಿಯೇತರ ಚಟುವಟಿಕೆಗಳನ್ನು ಸ್ವ-ಸಹಾಯ ಸಂಘಗಳು ಸ್ಥಾಪಿಸಿ ಆರ್ಥಿಕವಾಗಿ ಅಭಿವೃದ್ಧಿಯಾಗಲು ಒಕ್ಕೂಟಗಳ ಪಾತ್ರ ಬಹುಮುಖ್ಯವೆಂದು ಸಹಾಯಕ ಯೋಜನ ನಿರ್ದೇಶಕರಾದ ಭೀಮಪ್ಪ ತಳವಾರ ರವರು ತಿಳಿಸಿದರು.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಬಾಗಲಕೋಟೆ ಇವರ ವತಿಯಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಂಜೀವಿನಿ ಮಹಿಳಾ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಜಿಲ್ಲೆಯ ಅಧ್ಯಕ್ಷರುಗಳಿಗೆ ಬಾಗಲಕೋಟೆಯ ಜಿಲ್ಲಾ ಸಂಪನ್ಮೂಲ ಕೇಂದ್ರದಲ್ಲಿ ಮೂರು ದಿನಗಳ ವಸತಿ ಸಹಿತ ತರಬೇತಿ ಕಾರ್ಯಕ್ರಮದಲ್ಲಿ ದೀಪ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿ ಮಾತನಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ಮಹಿಳೆಯರನ್ನು ಒಗ್ಗೂಡಿಸಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳಾ ಸ್ವ ಸಹಾಯ ಸಂಘಗಳ ಒಕ್ಕೂಟಗಳು ರಚನೆ ಮಾಡಿ ಒಕ್ಕೂಟ ವತಿಯಿಂದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ಒಕ್ಕೂಟಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ ಸಂಜೀವಿನಿ ಯೋಜನೆಯ ಆಶ್ರಯದಲ್ಲಿ ಒಕ್ಕೂಟಗಳಿಗೆ ತರಬೇತಿ ಹಾಗು ಮೇಲ್ವಿಚಾರಣೆ ಮಾಡ ಲಾಗುತ್ತಿದೆ ಎಂದು ತಿಳಿಸಿ ಒಕ್ಕೂಟಗಳು ವ್ಯವಸ್ಥಿತವಾಗಿ ಪ್ರಗತಿ ಹೊಂದಬೇಕಾದರೆ ಅಧ್ಯಕ್ಷರಗಳ ನಿಸ್ವಾರ್ಥ ಸೇವೆ ಅತಿ ಮುಖ್ಯವೆಂದು ತಿಳಿಸಿದರು.

ಈ ಕಾರ್ಯಗಾರದಲ್ಲಿ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಮಲ್ಲಿಕಾರ್ಜುನ, ಸವಿತ, ಭೀಮಶಿ ಕೊರೆಪ್ಪಗೋಳ, ಗೋಪಾಲ ಗದಗಿನ್ನವರು ಮತ್ತು ಭೀಮನಂದ ಶೆಟ್ಟರ್ ಹಾಗೂ ಜಿಲ್ಲೆಯ ಎಲ್ಲ 183 ಒಕ್ಕೂಟದ ಅಧ್ಯಕ್ಷರು ಭಾಗವಹಿಸಿದ್ದರು. ಎಂದು ರೇವಣಸಿದ್ಧ ಮರೆಗುದ್ದಿಯವರು ಹೇಳಿದರು.

# ಆಶೀಫ ಹುಸೇನಸಾಬ ಕೊಣ್ಣೂರ ಎಂಬ ವ್ಯಕ್ತಿ ಕಾಣೆ



**ಬಾಗಲಕೋಟೆ :** ಜಿಲ್ಲೆಯ ಮುಧೋಳ ನಗರದ ಆಶೀಫ ಹುಸೇನಸಾಬ ಕೊಣ್ಣೂರ (34) ಎಂಬ ವ್ಯಕ್ತಿ ದಾವಣಗೇರೆಗೆ ಹೋಗಿ ಡಾಲಬೀ ಬಾಡಿಗೆ ಹಣ ಪಡೆದುಕೊಂಡು ಬರುವದಾಗಿ ಹೇಳಿ ಹೋದವರು ಮರಳಿ ಬರದೇ ಕಾಣೆಯಾಗಿರುತ್ತಾರೆ. ಸದರಿ ವ್ಯಕ್ತಿಯು ಸಾದಗೆಂಪು ಬಣ್ಣ, ಗುಂಡು ಮುಖ, ಉರ್ದು, ಹಿಂದಿ ಮತ್ತು ಕನ್ನಡ ಮಾತನಾಡುತ್ತಿದ್ದು, ಹಸಿರು ಬಣ್ಣದ ಟೀಶರ್ಟ, ಕರಿ ಬಣ್ಣದ ನೈಟ್ ಪ್ಯಾಂಟ್ ಧರಿಸಿದ್ದಾರೆ. ಈ ತರಹದ ಚಹರೆಯ ವಿವರಣೆಯುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ, ಸುಳಿವು ದೊರೆತಲ್ಲಿ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು (08354-235079, 9480803910), ಜಮಖಂಡಿಡಿ.ಎಸ್.ಪಿ(08353-220114, 9480803921), ಮುಧೋಳ ಸಿಪಿಐ (08350-280103, 9480803936), ಪಿ.ಎಸ್.ಐ (08350-280133, 9480803960)ಗೆ ಕರೆ ಮಾಡುವಂತೆ ಮುಧೋಳ ಪಿ.ಎಸ್.ಐ ಅಜೀತಕುಮಾರ ಹೊಸಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರಮಟ್ಟದ ಖೋ ಖೋ ಪಂದ್ಯದಲ್ಲಿ ಕರ್ನಾಟಕಕ್ಕೆ ಎರಡನೇ ಸ್ಥಾನ

## ವಿಜಯಪುರ ಜಿಲ್ಲೆಗೆ ಕೀರ್ತಿ ತಂದ: ಬಸವನಾಡಿನ ಶ್ರಾವಣಿ ಮತ್ತು ವರ್ಷಾ

**ವರದಿ:ಲಾಲಸಾಬ ಸವಾರಗೋಳ**



**ವಿಜಯಪುರ :** ಅಯೋಧ್ಯೆಯಲ್ಲಿ ಡಿ:24 ರಂದು ಜರುಗಿದ ರಾಷ್ಟ್ರಮಟ್ಟದ 17 ವಯೋಮಾನದೊಳಗಿನ ಬಾಲಕೀಯರ ಖೋ ಖೋ ಪಂದ್ಯಾವಳಿಗಳಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ನಡುವೆ ನಡೆದ ಫೈನಲ್ ಪಂದ್ಯದಲ್ಲಿ ನಮ್ಮ ಕರ್ನಾಟಕ ರಾಜ್ಯ ತಂಡ ದ್ವೀತಿಯ ಸ್ಥಾನ ಪಡೆದುಕೊಂಡು ರಾಜ್ಯದ ಕೀರ್ತಿ ಪತಾಕೆ ಹಾರಿಸಿದ್ದಾರೆ.

ನಮ್ಮ ಕರ್ನಾಟಕ ತಂಡದಲ್ಲಿ ವಿಜಯಪುರ ಜಿಲ್ಲೆಯ ಬಸವನಾಡಿನ ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ಶಾಲೆಯ ಶ್ರಾವಣಿ ಸಾಲಳ್ಳಿ ಹಾಗೂ ವರ್ಷಾ ಬಂಡಿವಡ್ಡರ ಅವರು ಆಯ್ಕೆಯಾಗಿ ಈ ಪಂದ್ಯದಲ್ಲಿ ಒಳ್ಳೆಯ ಪ್ರದರ್ಶನ ನೀಡಿ ವಿಜಯಪುರ ಜಿಲ್ಲೆಗೆ ಮತ್ತು ನಮ್ಮ ಬಸವನಾಡಿನ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಹೆಚ್ಚಿಸಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕ ಜಗದೀಶ್ ಸಾಲಳ್ಳಿ ಮಾತನಾಡಿ ಇತ್ತೀಚಿನ ವರ್ಷಗಳಲ್ಲಿ ಕ್ರೀಡೆಗೆ ಹೆಚ್ಚಿನ ಆದ್ಯತೆ ಸಿಗುತ್ತಿದೆ. ಒಲಿಂಪಿಕ್ಸ್ ಕಾಮನ್ವೆಲ್ತ್ ಗೇಮ್ಸ್ ನಲ್ಲಿ ಕೂಡಾ ಭಾರತೀಯರು ಪದಕಗಳನ್ನು ಪಡೆಯುತ್ತಿದ್ದಾರೆ. ಸಿನಿಮಾ ತಾರೆಯರನ್ನು ಹೊರತುಪಡಿಸಿದರೆ ಕ್ರೀಡಾಪಟುಗಳಿಗೆ ಹೆಚ್ಚಿನ ಅಭಿಮಾನಿಗಳು ಇರುತ್ತಾರೆ. ಆದ್ದರಿಂದ ನಮ್ಮ ಊರಿನ ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಇನ್ನುಳಿದ ಕ್ರೀಡಾಪಟುಗಳಿಗೆ ಸ್ಫೂರ್ತಿ ಪಡೆದು ಕೊಂಡಿದ್ದಾರೆ. ನಮ್ಮ ಶಾಲೆಯ ವಿದ್ಯಾರ್ಥಿಗಳು ಇನ್ನು ಹೆಚ್ಚಿನ ಸಾಧನೆ ಮಾಡುವ ಮೂಲಕ ಕಾಲೇಜಿನ ಜತೆಗೆ ನಿಮ್ಮ ತಂದೆ, ತಾಯಿಗೂ ಉತ್ತಮ ಹೆಸರು ತರಬೇಕು ಎಂದರು

ಈ ಸಾಧನೆಗೈದ ಕ್ರೀಡಾಪಟುಗಳಿಗೆ ಊರಿನ ಹಿರಿಯರು ಮತ್ತು ಯುವಕ ಮಿತ್ರರು ಮತ್ತು ಸರ್ವ ಶಿಕ್ಷಕ ವೃಂದದವರು ಅಭಿನಂದಿಸಿದರು.

# ಅಜಾತ ಶತ್ರು ವಾಜಪೇಯಿ: ಶಾಸಕ ಸಿದ್ದು ಸವದಿ



**ರಬಕವಿ-ಬನಹಟ್ಟಿ :** ದೇಶಕ್ಕೆ ಪಾರದರ್ಶಕ ಆಡಳಿತವನ್ನು ನೀಡಿರುವ ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ದೇಶ ಕಂಡ ಶ್ರೇಷ್ಠ ಪ್ರಧಾನಿಯಾಗಿದ್ದರು. ದೇಶಕ್ಕೆ ಬೇಕಾಗುವ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಮೊದಲ ಆದ್ಯತೆಯನ್ನು ಅವರು ನೀಡಿದರು. ಅವರಿಂದಾಗಿಯೇ ಇಂದು ಭಾರತದಲ್ಲಿ ಉತ್ತಮ ದರ್ಜೆಯ ರಸ್ತೆಗಳನ್ನು ಕಾಣುತ್ತಿದ್ದೇವೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಬುಧವಾರ ಭಾರತೀಯ ಜನತಾ ಪಕ್ಷದ ಬನಹಟ್ಟಿಯ ಕಾರ್ಯಾಲಯದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರ ನೂರನೇ ಜಯಂತ್ಯೋತ್ಸವದ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಪಕ್ಷದ ಕಾರ್ಯಕರ್ತರು ವಾಜಪೇಯಿ ಅವರ ತತ್ವ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪಕ್ಷದ ಅಭಿವೃದ್ಧಿಗಾಗಿ ನಾವು ನಮ್ಮ ದಿನದ ಒಂದಿಷ್ಟು ಸಮಯನ್ನಾದರೂ ನೀಡಬೇಕು. ಪ್ರಾಮಾಣಿಕತೆಯಿಂದ ಪಕ್ಷದ ಏಳ್ಗೆಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಸವದಿ ತಿಳಿಸಿದರು. ಬಿಜೆಪಿ ಮುಖಂಡ ಶಿವಾನಂದ ಗಾಯಕವಾಡ ಮಾತನಾಡಿ, ಅವರ ನೂರನೇ ಹುಟ್ಟು ಹಬ್ಬವನ್ನು ನಾವು ಇಂದು ಸುಶಾಸನ ದಿನವನ್ನಾಗಿ ಅಚರಣೆ ಮಾಡುತ್ತಿದ್ದೇವೆ. ವಾಜಪೇಯಿ ಅವರು ಕವಿ, ಪತ್ರಕರ್ತ, ವಾಗ್ಮಿ, ಚಿಂತಕ ಹಾಗೂ ಒಬ್ಬ ಅಜಾತ ಶತ್ರು ರಾಜಕಾರಣಿಯಾಗಿದ್ದರು ಎಂದರು.

ರಬಕವಿ ಬನಹಟ್ಟಿ ನಗರ ಘಟಕದ ಅಧ್ಯಕ್ಷ ಶ್ರೀಶೈಲ ಬೀಳಗಿ, ನಗರಾಧ್ಯಕ್ಷೆ ವಿದ್ಯಾ ಧಬಾಡಿ, ಗೌರಿಮಿಳ್ಳಿ,

ಸುವರ್ಣಾ ಕೊಪ್ಪದ, ಪವಿತ್ರಾ ತುಕ್ಕನ್ನವರ, ಗೋವಿಂದ ಡಾಗಾ,

ಪ್ರಭು ಪೂಜಾರಿ, ಚಂದ್ರಶೇಖರ ಮಿರ್ಜಿ, ಅಶೋಕ ರಾವಳ, ಭೀಮಶಿ ಪಾಟೀಲ, ರವಿ ಕೊರ್ತಿ, ಶಿವಾನಂದ ಬುದ್ನಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಜಾಗೃತಿ ಸಮಿತಿಗೆ ಫಕೀರಪ್ಪ ಮಾದರ ನೇಮಕ



**ಬಾಗಲಕೋಟೆ :** ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಜಿಲ್ಲಾ ಮಟ್ಟದ ಜಾಗೃತಿ ಹಾಗೂ ಉಸ್ತುವಾರಿ ಸಮಿತಿಗೆ ಹಿರೇಶೆಲ್ಲಿಕೇರಿ ಗ್ರಾಮದ ಯುವ ಮುಖಂಡ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಸಂಘಟನೆಯ ಜಿಲ್ಲಾಧ್ಯಕ್ಷ ಫಕೀರಪ್ಪ ಮಾದರ ಅವರನ್ನು ಪದಾಧಿಕಾರಿ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಡಿ.ಸಿ., ಎಸ್.ಪಿ., ಸಂಸದ, ಶಾಸಕ, ವಿ.ಪ.ಸದಸ್ಯ ಮೂವರು ಎ ಗುಂಪಿನ ಪ.ಜಾ. ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುವ ಈ ಸಮಿತಿಯಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಪರಿಶಿಷ್ಠ ಜಾತಿ.ಪರಿಶಿಷ್ಠ ವರ್ಗದ ಅಧಿಕಾರೇತರ ಸದಸ್ಯ ಸ್ಥಾನದಲ್ಲಿ ಫಕೀರಪ್ಪ ಮಾದರ ಅವರನ್ನು ಬೀಳಗಿ ಕ್ಷೇತ್ರದ ಶಾಸಕರಾಗಿರುವ ಜೆ.ಟಿ.ಪಾಟೀಲ ಅವರ ಶಿಫಾರಸ್ಸಿನ ಮೇರೆಗೆ ಜಿಲ್ಲಾಧಿಕಾರಿಗಳು ಈ ನೇಮಕ ಆದೇಶ ಹೊರಡಿಸಿದ್ದಾರೆ.

# ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ವಿವಿಧ ಕಾರ್ಯಕ್ರಮ



**ರಬಕವಿ-ಬನಹಟ್ಟಿ :** ಶ್ರೀ ಗುರುದೇವ ಬ್ರಹ್ಮಾನಂದರ 159 ನೇ ಮತ್ತು ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ 81 ನೇ ಜಯಂತಿ ಮಹೋತ್ಸವ, ಮೂರನೇ ಪೀಠಾಧ್ಯಕ್ಷರಾದ ಶ್ರೀಗುರುಸಿದ್ದೇಶ್ವರಮಹಾಸ್ವಾಮಿಗಳದ್ವಾದಶ ಪೀಠಾರೋಹಣ ಮಹೋತ್ಸವ, ಗುರುದೇವ ಮಂದಿರದ ಕಳಸಾರೋಹಣ, ಗುರುಭವನ ಮತ್ತು ಗ್ರಂಥಗಳ ಲೋಕಾರ್ಪಣೆ ಹಾಗೂ ಮಕರ ಸಂಕ್ರಮಣ ಮಹೋತ್ಸವ ಹೀಗೆ ವಿವಿಧ ಕಾರ್ಯಕ್ರಮಗಳು ಡಿಸೆಂಬರ್ 29 ರಿಂದ ಜನೇವರಿ 14 ರವರೆಗೆ ಶ್ರೀಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಜರುಗಲಿವೆ ಎಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಶ್ರೀಗಳು ಹೇಳಿದರು.

ಅವರು ರಬಕವಿಯ ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಡಿಸೆಂಬರ್ 29 ರಂದು ಮುಂಜಾನೆ 9 ಕ್ಕೆ ಪ್ರಣವ ಧ್ವಜಾರೋಹಣ ನಡೆಯಲಿದ್ದು, ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದಾರೆ. ಚಿಮ್ಮಡದ ರಘುನಾಥಪ್ರಿಯ ಶ್ರೀ ಜನಾರ್ಧನ ಮಹಾರಾಜರ ಸಮ್ಮುಖದಲ್ಲಿ ನಡೆಯಲಿದೆ. ಅದೇ ದಿನ ಸಂಜೆ ನಾಲ್ಕಕ್ಕೆ ಗುರುದೇವರ ಉತ್ಸವಕ್ಕೆ ಶಾಸಕ ಸಿದ್ದು ಸವದಿ ಚಾಲನೆ ನೀಡಲಿದ್ದು, ಶ್ರೀ ಗುರುದೇವ ಬ್ರಹ್ಮಾನಂದ ಶಿವಯೋಗಿಗಳ ಬೆಳ್ಳಿ ಮೂರ್ತಿ, ಗುರುದೇವ ಮಂದಿರದ 34 ಕಳಶಗಳು, ದ್ವಾದಶ ಪೀಠಾರೋಹಣ ನಿಮಿತ್ಯ ಶ್ರೀ ಗುರುಸಿದ್ದೇಶ್ವರ ಮಹಾಸ್ವಾಮಿಗಳ ಕಿರೀಟಗಳ ಭವ್ಯ ಮೆರವಣಿಗೆ ರಾಮಪೂರದ ಶ್ರೀ ನೀಲಕಂಠೇಶ್ವರ ಮಠದಿಂದ ರಬಕವಿಯ ಮುಖ್ಯ ರಸ್ತೆಯಿಂದ ಸಾಗಿ ಬ್ರಹ್ಮಾನಂದ ಆಶ್ರಮದವರೆಗೆ ಪೂರ್ಣ ಕುಂಭ, ಕಳಶ, ಆರತಿ, ನಂದಿಕೋಲು, ಕಹಳೆ, ಡೊಳ್ಳು ಮೇಳ, ಬ್ಯಾಂಡ್ಮೇಳ, ದಾನೇಶ್ವರಿ ಮಹಿಳಾ ಮಂಡಳದ ವಾರ್ಕರಿ ನೃತ್ಯ, ಭಜನೆ, ಸಮ್ಮಾಳ, ಕರಡಿ ಮಜಲು ಮುಂತಾದ ಸಕಲ ವಾದ್ಯಮೇಳಗಳೊಡನೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಆಶ್ರಮಕ್ಕೆ ಆಗಮಿಸಲಿದೆ.

ಡಿಸೆಂಬರ್ 30 ರಂದು ಗುರುದೇವರ ಕಾರ್ತಿಕೋತ್ಸವ, ಅನುಭಾವದಂಗಳ-145, ಮಹಾತ್ಮರ ಚರಿತಾಮೃತ ಪ್ರವಚನ ಆರಂಭಗೊಳ್ಳಲಿದೆ. ಗುಳೇದಗುಡ್ಡದ ಬಸವರಾಜಪಟ್ಟದಾರ್ಯಶ್ರೀ,ಘೋಡಗೇರಿಯ ಮಲ್ಲಯ್ಯಶ್ರೀ, ದಾವಣಗೆರೆಯ ಡಾ. ಬಸವಪ್ರಭುಶ್ರೀ, ರಬಕವಿಯ ಗುರುಮಹಾಂತಶ್ರೀ, ರನ್ನಬೆಳಗಲಿಯ ಸಿದ್ಧರಾಮಶ್ರೀಪಾಲ್ಗೊಳ್ಳಲಿದ್ದಾರೆ.ಡಿಸೆಂಬರ 31 ರಂದು ಶಿವಸ್ಮರಣೆಯಲ್ಲಿ ಚಿಮ್ಮಡದ ಪ್ರಭುಶ್ರೀ, ಬನಹಟ್ಟಿಯ ಶರಣಬಸವ ಶಿವಾಚಾರ್ಯರು, ಹಳಿಂಗಳಿಯ ಶರಣ ಬಸವದೇವರು, ಮಲ್ಲಿಕಾರ್ಜುನ ನಾವಿ, ಡಾ. ಬಸವರಾಜ ಗೌಡರ ಪಾಲ್ಗೊಳ್ಳುವರು. ಜನೇವರಿ 1 ರಂದು ಕಳಸಾರೋಹಣ ಹಾಗೂ ಧರ್ಮಸಭೆ ಜರುಗಲಿದ್ದು, ಗದುಗಿನ ಅಭಿನವ ಶಿವಾನಂದಶ್ರೀ, ಕೂಡಲ ಸಂಗಮದ ಜಯಮೃತ್ಯುಂಜಯ ಶ್ರೀ, ಕರಿಕಟ್ಟಿಯ ಬಸವರಾಜಶ್ರೀ, ಹಳಿಂಗಳಿಯ ಶಿವಾನಂದಶ್ರೀ, ಹಳೆಹುಬ್ಬಳ್ಳಿಯ ಶಿವಶಂಕರ ಶಿವಾಚಾರ್ಯರು, ಇಬ್ರಾಹಿಂಪುರದ ದಯಾನಂದಶ್ರೀ, ಜಮಖಂಡಿಯ ಮಾಜಿ ಶಾಸಕ ಆನಂದ ನ್ಯಾಮಗೌಡ, ಕಾಂಗ್ರೆಸ್ ಪಕ್ಷದ ಧುರೀಣರಾದ ಸಿದ್ದು ಕೊಣ್ಣೂರ, ಡಾ. ಪದ್ಮಜೀತ್ ನಾಡಗೌಡ, ಸಂಜೀವ ಬಳಿಗಾರ, ಪಿಎಸ್ಐ ಅಪ್ಪು ಐಗಳಿ, ಪ್ರಕಾಶ ದೇಸಾಯಿ ಪಾಲ್ಗೊಳ್ಳಲಿದ್ದಾರೆ. ಜನೇವರಿ 1 ರಂದು ಸಂಜೆ ಬಸವಾದಿ ಶರಣರ ಸ್ಮರಣೆಯಲ್ಲಿ ಡಂಬಳದ ಡಾ. ತೋಂಟದ ಸಿದ್ಧರಾಮಶ್ರೀ, ಬೆಳಗಾವಿಯ ಡಾ. ಅಲ್ಲಮಪ್ರಭುಶ್ರೀ, ಹಾರೂಗೇರಿಯ ಐ. ಆರ್. ಮಠಪತಿ, ಡಾ. ಎಫ್. ವ್ಹಿ. ಮಾನ್ವಿ, ಶಿವಾನಂದ ಶೆಲ್ಲಿಕೇರಿ ಪಾಲ್ಗೊಳ್ಳಲಿದ್ದು, 'ನಮ್ಮ ರಬಕವಿ' ಕೃತಿ ಲೋಕಾರ್ಪಣೆಯಾಗಲಿದೆ.

ಜ. 2 ರಂದು ಗುರುಭವನ ಲೋಕಾರ್ಪಣೆ ಹಾಗೂ ಧರ್ಮಸಭೆ ಜರುಗಲಿದ್ದು, ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯಶ್ರೀ, ನಿಡಸೋಸಿಯ ಶಿವಲಿಂಗೇಶ್ವರಶ್ರೀ, ಘಟಪ್ರಭಾದ ಡಾ. ಮಲ್ಲಿಕಾರ್ಜುನಶ್ರೀ, ನರಸೀಮುರದ ಶಾಂತಭೀಷ್ಮ ಚೌಡಯ್ಯಶ್ರೀ, ಶಾಸಕ ಸಿದ್ದು ಸವದಿ, ಸಂಸದ ಪಿ. ಸಿ. ಗದ್ದಿಗೌಡರ, ಸಚಿವ ಆರ್. ಬಿ. ತಿಮ್ಮಾಪೂರ, ಶಾಸಕ ಹನುಮಂತ ನಿರಾಣಿ, ಶಾಸಕಿ ಡಾ. ಉಮಾಶ್ರೀ, ಶಾಸಕ ಜಗದೀಶ ಗುಡಗುಂಟಿ ಪಾಲ್ಗೊಳ್ಳಲಿದ್ದಾರೆ. ತೇರದಾಳದ ಮಲ್ಲಿಕಾರ್ಜುನ ಹಲಗಲಿ ಚಿತ್ರಿಸಿದ ಶ್ರೀ ಗುರುದೇವರ ಹಾಗೂ ಶ್ರೀ ಸಿದ್ದೇಶ್ವರ ಶ್ರೀಗಳ ತೈಲವರ್ಣ ಚಿತ್ರಗಳು ಅನಾವರಣಗೊಳ್ಳಲಿವೆ. ಸಂಜೆ ಜ್ಞಾನನಿಧಿ ಚನ್ನಬಸವೇಶ್ವರ ಸ್ಮರಣೆ, ಜನೇವರಿ 3 ರಂದು ಅಂಕಲಗಿಯ ಅಡವಿ ಸಿದ್ದೇಶ್ವರ ಸ್ಮರಣೆ, ಜ. 4 ರಂದು ತಲೆಕಟ್ಟಿ ನಿರುಪಾಧೀಶರ ಸ್ಮರಣೆ, ಜ. 5 ರಂದು ಬನಹಟ್ಟಿ ರುದ್ರಮುನಿ ಶ್ರೀಗಳ ಸ್ಮರಣೆ, ಜ. 6 ರಂದು ಸಿದ್ಧಾರೂಢರ ಸ್ಮರಣೆ, ಜ. 7 ರಂದು ಅಥಣಿ ಮುರುಘೇಂದ್ರ ಶಿವಯೋಗಿಗಳ ಸ್ಮರಣೆ, ಜ. 8 ರಂದು ಗದುಗಿನ ಶಿವಾನಂದಶ್ರೀ ಸ್ಮರಣೆ, ಜ. 9 ರಂದು ಗುರುದೇವ ಬ್ರಹ್ಮಾನಂದಶ್ರೀ ಸ್ಮರಣೆ, ಜ. 10 ರಂದು ಸಿದ್ದೇಶ್ವರಶ್ರೀ ಸ್ಮರಣೆ, ಜ. 11 ರಂದು ನಿಜಗುಣ ಶಿವಯೋಗಿಗಳ ಸ್ಮರಣೆ, ಜ. 12 ರಂದು ಸ್ವಾಮಿ ವಿವೇಕಾನಂದ ಸ್ಮರಣೆ, ಜ. 13 ರಂದು ಗುರು ಪರಂಪರೆ ಸ್ಮರಣೆ, ಜ. 14 ರಂದು ಪೀಠಾರೋಹಣ ಹಾಗೂ ಮಕರ ಸಂಕ್ರಮಣ ಮಹೋತ್ಸವ ನಡೆಯುತ್ತದೆಂದು ಗುರುಸಿದ್ದೇಶ್ವರ ಶ್ರೀಗಳು ವಿವರಿಸಿದರು.

ಈ ಸಂದರ್ಭದಲ್ಲಿ ಗಿರೀಶ ಮುತ್ತೂರ, ಬಾಲಚಂದ್ರ ಹೊಸಕೋಟಿ, ಶ್ರೀಕಾಂತ ಮೇಲಿನಮನಿ, ಸುರೇಶ ಗೊಲಭಾಂವಿ, ಮಹಾದೇವ ಕವಿಶೆಟ್ಟಿ, ಶಿವಾನಂದ ದಾಶಾಳ, ಬುದ್ದಪ್ಪ ಕುಂದಗೋಳ ಸೇರಿದಂತೆ ಇನ್ನೂ ಅನೇಕ ಪ್ರಮುಖರು ಉಪಸ್ಥಿತರಿದ್ದರು.

# ವಿಶ್ವ ಮಾನವ ಹಕ್ಕುಗಳು ದಿನಾಚರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮ



**ಲಿಂಗಸಗೂರು :** ಮುದಗಲ್ ಪಟ್ಟಣದಲ್ಲಿ.ತಾಲೂಕು ಕಾನೂನು ಸೇವಾ ಸಮಿತಿ, ಲಿಂಗಸುಗೂರು. ತಾಲೂಕು ನ್ಯಾಯವಾದಿಗಳ ಸಂಘ, ತಾಲೂಕು ಆಡಳಿತ, ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ, ಶಿಕ್ಷಣ ಇಲಾಖೆ, ಪೋಲೀಸ್ ಇಲಾಖೆ. ಶ್ರೀ ಎಸ್.ವಿ.ಎಮ್.ಪ್ರೌಡಶಾಲೆ ಮುದಗಲ್. ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನವ ಹಕ್ಕುಗಳು ದಿನಾಚರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮ ಅಭಿಯಾನ. ಅಂಗವಾಗಿ. ಸಸಿಗೆ ನೀರು ಹಾಕುವ ಮುಖಾಂತರ ಈ ಕಾರ್ಯಕ್ರಮಕೇ ಚಾಲನೆ ನೀಡಿ ಈ ಸಂದರ್ಭದಲ್ಲಿ ಮಾತನಾಡಿದ.ಸನ್ಮಾನ್ಯ ಶ್ರೀ ಗೌರವಾನ್ವಿತ ಶ್ರೀಮತಿ ಉಂಡಿ ಮಂಜುಳಾ ಶಿವಪ್ಪ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಹಾಗೂ ಅಧ್ಯಕ್ಷರು ತಾ.ಕಾ.ಸೇ.ಸ, ಸಮಾಜದಲ್ಲಿ ಎಲ್ಲಾ ವರ್ಗದ ಜನರು ಗೌರವಯುತವಾಗಿ ಜೀವನ ನಡೆಸಬೇಕು. ಯಾವುದೇ ಜಾತಿ, ವರ್ಗಗಳ ತಾರತಮ್ಯವಿಲ್ಲದೇ ಸಮಾನತೆಯ ಹಕ್ಕು ದೊರೆಯಬೇಕು. ತಾರತಮ್ಯ ಮಾಡಿದರೆ ಅದು ಸಂವಿಧಾನ ನೀಡಿರುವ ಹಕ್ಕುಗಳ ಉಲ್ಲಂಘನೆಯಾಗುತ್ತದೆ.ಮಾನವ ಹಕ್ಕುಗಳನ್ನು ಎತ್ತಿಹಿಡಿಯುವ ಪ್ರಯತ್ನದ ಒಂದು ನಿರ್ದಿಷ್ಟ ಮುಖದತ್ತ ಗಮನ ಸೆಳೆಯಲು ಪ್ರತಿ ವರ್ಷ ಒಂದು ಥೀಮ್ ಅನ್ನು ಆಯ್ಕೆ ಮಾಡಲಾಗುತ್ತದೆ. ಥೀಮ್ಗಳು ತಾರತಮ್ಯವನ್ನು ಕೊನೆಗೊಳಿಸುವುದು , ಬಡತನದ ವಿರುದ್ಧ ಹೋರಾಡುವುದು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಬಲಿಪಶುಗಳನ್ನು ರಕ್ಷಿಸುವುದನ್ನು ಒಳಗೊಂಡಿವೆ . ಮಾನವ ಹಕ್ಕುಗಳ ರಕ್ಷಕ" ಎನ್ನುವುದು ವೈಯಕ್ತಿಕವಾಗಿ ಅಥವಾ ಇತರರೊಂದಿಗೆ, ಶಾಂತಿಯುತ ರೀತಿಯಲ್ಲಿ ಮಾನವ ಹಕ್ಕುಗಳನ್ನು ಉತ್ತೇಜಿಸಲು ಅಥವಾ ರಕ್ಷಿಸಲು ಕಾರ್ಯನಿರ್ವಹಿಸುವ ಜನರನ್ನು.ಮಾನವ ಹಕ್ಕುಗಳ ರಕ್ಷಕರನ್ನು ಅವರು ಏನು ಮಾಡುತ್ತಾರೆ ಎಂಬುದರ ಮೂಲಕ ಎಲ್ಲಕ್ಕಿಂತ ಹೆಚ್ಚಾಗಿ ಗುರುತಿಸಲಾಗುತ್ತದೆ.ಭ್ರಷ್ಟಾಚಾರವು ಎಲ್ಲಾ ದೇಶಗಳ ಮೇಲೆ ಪರಿಣಾಮ ಬೀರುವ ಒಂದು ಸಂಕೀರ್ಣ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿದ್ಯಮಾನವಾಗಿದೆ. ಭ್ರಷ್ಟಾಚಾರವು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತದೆ, ಆರ್ಥಿಕ ಅಭಿವೃದ್ಧಿಯನ್ನು ನಿಧಾನಗೊಳಿಸುತ್ತದೆ ಮತ್ತು ಸರ್ಕಾರದ ಅಸ್ಥಿರತೆಗೆ ಕೊಡುಗೆ ನೀಡುತ್ತದೆ ಯಂದರು.ಶ್ರೀ ಗೌರವಾನ್ವಿತ ಅಂಬಣ್ಣ ಕೆ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಹಾಗೂ ಸದಸ್ಯಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿ,ಅಧ್ಯಕ್ಷತೆಯಾನ್ನು - ಸೈಯದ್ ಸಾಧಿಕ್ ತಾತ ಅಧ್ಯಕ್ಷರು, ಜಿಲ್ಲಾ ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ, ರಾಯಚೂರು.ಹಂಬಣ್ಣ ರಾಠೋಡ ಕ್ಷೇತ್ರಶಿಕ್ಷಣಾಧಿಕಾರಿಗಳು, ಡಾ. ಶಶಿಕಲಾ ಭೋವಿ ಅಧ್ಯಕ್ಷರು, ಜಿಲ್ಲಾ ಮಹಿಳಾ ಜನಜಾಗೃತ ವೇದಿಕೆ, ರಾಯಚೂರು.ಬಾಲಚಂದ್ರ ದಾಸರು ಅಧ್ಯಕ್ಷರು ಪ್ರೌಡಶಾಲೆ ವಿಭಾಗ, ಲಿಂಗಸುಗೂರು.ಸಂಗಯ್ಯ ಮುಖ್ಯಗುರುಗಳು, ಎಸ್.ವಿ.ಎಮ್. ಪ್ರೌಡಶಾಲೆ, ಮುದಗಲ್.ಹುಸೇನ್ ಬಾಷಾ ಅಧ್ಯಕ್ಷರು, ತಾಲೂಕು ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ,ಶೇಖ ಅಹ್ಮದ್ ಕಾರ್ಯದರ್ಶಿಗಳು,ತಾಲೂಕು ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆ, ಲಿಂಗಸುಗೂರು.ಹಾಗೂ ಶಾಲಾ ಗುರುಗಳು. ಮಹಿಳಾ ಸಂಘದ. ಸದ್ಯಸರು ವಿದ್ಯಾರ್ಥಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

## ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ-2025

# ಜಾಗೃತಿ ಜಾಥಾ ನಿಮಿತ್ಯ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ

**ಕೊಪ್ಪಳ :** ಸಂಸ್ಥಾನ ಶ್ರೀ ಗವಿಮಠದಜಾತ್ರಾ ಮಹೋತ್ಸವವೆಂದರೆ, ವಿನೂತನ ವಿಶೇಷತೆಯ ಹೊಸತನದಆಧುನಿಕ ಸ್ಪರ್ಷತೆಯ ಸಂಗಮ. ಪ್ರತಿ ವಷ ರ್ಒಂದಲ್ಲಾಒಂದುರೀತಿಯಜನಜೀವನದ ಪ್ರಗತಿಗೆಜಾಗೃತಿ ಮೂಡಿಸಲುಅಗತ್ಯವಾದಉಪಯುಕ್ತಜನಜಾಗೃತಿಕಾರ್ಯ ಕ್ರಮವಾಗಿದೆ. ಈ ವರ್ಷವೂ ಸಹ ವಿನೂತನವಾದಜಾಗೃತಿ ಮೂಡಿಸಲು ಶ್ರೀಮಠವು ಹೊಸ ಸಂಕಲ್ಪದೊಂದಿಗೆ ಸಿದ್ಧವಾಗಿದೆ.

ಪ್ರಸ್ತುತಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ2025ರ 'ಸಾಮಾಜಿಕಜಾಗೃತಿ ವಿಷಯವಾಗಿ'ಸಕಲಚೇತನ'ಎಂಬ ಶೀರ್ಷಿಕೆಯ ಅಡಿಯಲ್ಲಿವಿಕಲಚೇತನರ ನಡೆ ಸಕಲಚೇತನದಕಡೆ ಎಂಬ ಘೋಷ ವಾಕ್ಯದೊಂದಿಗೆಜಾಗೃತಿಜಾಥಾಹಮ್ಮಿಕೊಳ್ಳಲಾಗಿದೆ. ದಿನಾಂಕ 11.01.2025ರ ಶನಿವಾರ ಬೆಳಿಗ್ಗೆ 8.00 ಗಂಟೆಗೆ ಕೊಪ್ಪಳದ ಬಾಲಕಿಯರ ಸರಕಾರಿಕಾಲೇಜಿನ ಮೈದಾನ(ತಾಲೂಕುಕ್ರೀಡಾಂಗಣ)ದಿಂದಆರಂಭವಾಗಿ ಅಶೋಕ ವೃತ್ತ, ಜವಾಹರರಸ್ತೆ, ಗಡಿಯಾರಕಂಬದ ಮೂಲಕ ಶ್ರೀಗವಿಮಠದ ಜಾತ್ರಾ ಮಹಾದಾಸೋಹಕ್ಕೆತಲುಪಿ ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯವಾಗಲಿದೆ.

ಈ ಒಂದು ಸತ್ಕಾರ್ಯಕ್ಕೆ ಭಕ್ತರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಾರ್ವಜನಿಕ ಶಿಕ್ಷಣ ಹಾಗೂ ಸಾಕ್ಷರತಾಇಲಾಖೆ, ಆರೋಗ್ಯ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾಕೌಶಲ್ಯಾಭಿವೃದ್ಧಿ ಇಲಾಖೆ, ಭಾರತೀಯರೆಡ್‌ಕ್ರಾಸ್ ಸಂಸ್ಥೆ ಹಾಗೂ ಸ್ಥಳೀಯ ಶಿಕ್ಷಣ ಸಂಸ್ಥೆಗಳ ಸಹಕಾರ ಪ್ರೋತ್ಸಾಹದೊಂದಿಗೆಆಯೋಜಿಸಲಾಗುತ್ತದೆ.

ಸದರಿಅಭಿಯಾನದ ಅಂಗವಾಗಿ ದಿನಾಂಕ 02.01.2025 ರಂದುಸ್ಥಳಿಯ ಶಾಲಾ, ಕಾಲೇಜು ಮಟ್ಟದಲ್ಲಿಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ವಿಕಲಚೇತನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಮಾಜದ ಸ್ಪಂದನೆ ಎಂಬ ವಿಷಯದ ಭಾಷಣ ಸ್ಪರ್ಧೆಯನ್ನುಆಯೋಜಿಸಲು ತಿಳಿಸಲಾಗಿದೆ.

ಈ ಸ್ಥಳಿಯ ಶಾಲಾ, ಕಾಲೇಜು ಮಟ್ಟದಲ್ಲಿಆಯ್ಕೆಯಾದ ವಿದ್ಯಾರ್ಥಿಗಳಿಗೆ ಸದರಿ ವಿಷಯದ ಮೇಲೆ ಜಿಲ್ಲಾ ಮಟ್ಟದ ಸ್ಪರ್ಧೆಯನ್ನುದಿನಾಂಕ 04.01.2025, ಶನಿವಾರದಂದು ಶ್ರೀ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜಾಗೃತಿಜಾಥಾ ನಡಿಗೆಯಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿಗೌರವಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ 9742307153. 9986591076ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಗವಿಮಠ ಪ್ರಕಟಣೆಯಲ್ಲಿ ತಿಳಿಸಿದೆ.

# ವಿಜಯ ಪದವಿ ಪೂರ್ವ ಕಾಲೇಜಿನಲ್ಲಿ ಚಿಕ್ಕಮಗಳೂರ ಶೈಕ್ಷಣಿಕ ಪ್ರವಾಸ



ನಗರದ ವಿಜಯ ಪದವಿ ಪೂರ್ವ ಕಾಲೇಜಿನಲ್ಲಿ 2024-25 ನೇ ಸಾಲಿನ ಚಿಕ್ಕಮಗಳೂರಿನ ಶೈಕ್ಷಣಿಕ ಪ್ರವಾಸವನ್ನು ದಿನಾಂಕ 17/01/2024 ರಂದು ಎರಡು ದಿನಗಳ 20/01/2024 ರವರೆಗೆ ಕೈಗೊಂಡಿದ್ದರು ಚಿಕ್ಕಮಗಳೂರಿನ ಸುಪ್ರಸಿದ್ದ ಪ್ರಾಕೃತಿಕ ಸೌಂದರ್ಯದ ಸಳ್ಥಗಳಾದ ಕರ್ನಾಟಕದ ಅತ್ಯಂತ ದೊಡ್ಡ ಶಿಖರ ಮುಳ್ಳಯ್ಯನಗಿರಿಯ ಶೂಟಿಂಗ್ ಪಾಯಿಂಟ್, ಬಾಬಾ ಬುಡನ್‌ಗಿರಿ ಜಡ್ ಪಾಯಿಂಟ್, ಉಕ್ಕಡ ಫಾಲ್ಸ, ಝುರಿ ಫಾಲ್ಸ, ಮತ್ತು ಇನ್ನು ಅನೇಕ ಪ್ರಾಕೃತಿಕ ರಮಣಿಯ ಸೌಂದರ್ಯವನ್ನು ಸವಿದರು ಮತ್ತು ಅನೇಕ ಸ್ಥಳಗಳನ್ನು ಭೇಟಿ ನೀಡಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State